ಮುಂಗಾರು
ರವಿವಾರ, ಜನವರಿ 25, 1987

ಬಿಸಿಯೇರಿದ ಗಡಿ ಪರಿಸ್ಥಿತಿ

ಉತ್ತರಭಾರತದಲ್ಲಿ ಮೈ ನಡುಗಿಸುವ ಚಳಿಗಾಳಿ ಬೀಸುತ್ತಿದ್ದರೂ ಭಾರತ–ಪಾಕಿಸ್ತಾನ ಗಡಿಯಲ್ಲಿ ಬಿಸಿ ವಾತಾವರಣ ನಿರ್ಮಾಣವಾಗಿದೆ. ಪಾಕಿಸ್ತಾನವು ಸುಮಾರು ಎರಡು ತಿಂಗಳ ಹಿಂದೆ ಪಂಜಾಬಿಗೆದುರಾಗಿ ಗಡಿಯ ಸಮೀಪ ಸೇನಾ ಕಾರ್ಯಾಚರಣೆ ತರಬೇತಿ ನಡೆಸಿದ ಬಳಿಕ ಸೈನ್ಯವನ್ನು ಹಿಂದೆಗೆಯುವ ಬದಲು ಅಲ್ಲೇ ಉಳಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಭಾರತವೂ ತನ್ನ ಸೈನ್ಯವನ್ನು ಗಡಿಯಲ್ಲಿ ಜಮಾಯಿಸಿದೆ. ಹಟಾತ್ತಾಗಿ ನಡೆಯಬಹುದಾದ ಆಕಸ್ಮಿಕ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸೂಕ್ತ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಭಾರತ–ಪಾಕಿಸ್ತಾನ ಗಡಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಸಾಕಷ್ಟು ಗಂಭೀರವಾದವುಗಳು. 1971ರಲ್ಲಿ ತುಟ್ಟಕೊಂಡ ಬಾಂಗ್ಲಾ ಸಮಸ್ಯೆಯ ಪರಿಣಾಮವಾಗಿ ಆ ವರ್ಷದ ಉತ್ತರಾರ್ಧದಲ್ಲಿ ಗಡಿಯಲ್ಲಿ ನಿರ್ಮಾಣಗೊಂಡ ಪರಿಸ್ಥಿತಿಗೆ ಇಂದಿನ ಪರಿಸ್ಥಿತಿಯನ್ನು ಹೋಲಿಸಬಹುದಾಗಿದೆ. ತರಬೇತಿ ಕಾರ್ಯಾಚರಣೆಗೆಂದು ಪಂಜಾಬಿನ ಅಬುಹಾರ್–ಫಜಿಲ್ಕಾ ವಿಭಾಗಕ್ಕೆದುರಾಗಿ ರಹೀಂ ಯಾರ್ ಖಾನ್ ಪ್ರದೇಶದಲ್ಲಿ ಬೀಡು ಬಿಟ್ಟಿದ್ದ ಪಾಕಿಸ್ತಾನದ ಸೈನ್ಯವು ಸಟ್ಲೆಜ್ ನದಿಯನ್ನು ದಾಟಿ ಗಡಿಯ ಮುಂಚೂಣಿಗೆ ಬಂದು ಆಕ್ರಮಣಕ್ಕೆ ಅಗತ್ಯವುಳ್ಳ ವ್ಯೂಹರಚನೆ ಮಾಡಿ ನಿಂತಿದೆ. ಭಾರತದೊಂದಿಗಿನ ಗಡಿಯುದ್ದಕ್ಕೂ ಪಾಕಿಸ್ತಾನದ ಸೈನ್ಯ ಮುಂಚೂಣಿಯಲ್ಲಿ ನೆಲೆ ನಿಂತಿದೆ. ಸುಮಾರು ಐದು ಲಕ್ಷ ಸೈನಿಕರಿಂದ ಸಜ್ಜಿತವಾದ ಸೇನಾ ದಳಗಳು ಭಾರತದ ಗಡಿಗೆ ಬಂದಿದ್ದು ಕೇವಲ ಮೂರು ಡಿವಿಜನುಗಳಷ್ಟು ಸೈನ್ಯ ಮಾತ್ರ ಅಫಘಾನಿಸ್ತಾನದ ಗಡಿಯಲ್ಲಿದೆ. ಶಸ್ತ್ರಾಸ್ತ್ರಗಳನ್ನೂ ಮದ್ದು ಗುಂಡುಗಳನ್ನೂ ಸಾಕಷ್ಟು ಪ್ರಮಾಣದಲ್ಲಿ ಮುಂಚೂಣಿಯಲ್ಲಿ – ಮುಖ್ಯವಾಗಿ ಪಂಜಾಬು ವಿಭಾಗದಲ್ಲಿ ಸಂಗ್ರಹಿಸಲಾಗಿದೆ. ಪಾಕ್ ಸೇನೆಯು ಕಾರ್ಯಾಚರಣೆಗೆ ಸಿದ್ಧತೆಯಾಗಿ ಭಾರತದ ಸೈನ್ಯವು ಮುಂದುವರಿಯಬಹುದಾದ ತಾಣಗಳಲ್ಲೆಲ್ಲ ನೆಲ ಬಾಂಬುಗಳನ್ನು ಚೆಲ್ಲಿದೆಯೆಂಬ ವರದಿಗಳೂ ಇವೆ.

ಆದರೆ ತರಬೇತಿ ಕಾರ್ಯಾಚರಣೆಗಾಗಿ ಮುಂಚೂಣಿಯ ವಾಯು ನೆಲೆಗಳಿಗೆ ಬಂದಿದ್ದ ವಿಮಾನ ಸೇನೆಯ ಸ್ಕ್ವಾಡ್ರನ್‌ಗಳು ಒಳನಾಡಿಗೆ ಹಿಂದಿರುಗಿವೆ ಎಂಬ ಸುದ್ದಿ ಬಂದಿದೆ. ಯುದ್ಧದ ಪೂರ್ವಭಾವಿಯಾಗಿ ಸಮರ ನೌಕೆಗಳು ಹೊರ ಸಮುದ್ರಕ್ಕೆ ಹೋಗುವುದು ಸಾಮಾನ್ಯ ವಿದ್ಯಮಾನವಾಗಿದ್ದರೂ ಈ ಬಾರಿ ಈ ತನಕವೂ ಪಾಕಿಸ್ತಾನದ ಯುದ್ಧ ನೌಕೆಗಳು ಹೊರಟಿಲ್ಲ.

ಆದರೂ ಗಡಿಯಲ್ಲಿ ನಡೆಯುತ್ತಿರುವ ಪಾಕಿಸ್ತಾನದ ಸೈನಿಕ ಚಟುವಟಿಕೆಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಪಂಜಾಬಿನಲ್ಲಿ ನಡೆಯುತ್ತಿರುವ ರಾಜಕೀಯ ಕ್ಷೋಭೆ, ಹಿಂಸಾಕಾಂಡಗಳು, ಖಾಲಿಸ್ತಾನವಾದಿಗಳ ಚಟುವಟಿಕೆಗಳ ಹಿನ್ನೆಲೆಯಲ್ಲಿ ಪಾಕಿಸ್ತಾನದ ಮಿಲಿಟರಿ ವಿದ್ಯಮಾನಗಳಿಗೆ ಮಹತ್ವ ಬಂದಿದೆ. ಈ ಹಿನ್ನೆಲೆಯಲ್ಲಿ ಭಾರತವು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಂತ ಅಗತ್ಯವಾಗಿತ್ತು. ಅದನ್ನೇ ಈಗ ಸರಕಾರ ಮಾಡಿದೆ. ಸೂಕ್ತವಾದ ಎಲ್ಲಾ ಕ್ರಮಗಳನ್ನು ಸರಕಾರ ಕೈಗೊಂಡ ವಾರ್ತೆ ಬಂದಿದೆ. ಸೈನ್ಯವು ಪಂಜಾಬಿನಾದ್ಯಂತ ಗಡಿಯಲ್ಲಿ ನಿಂತಿದೆ. ಈ ತನಕ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗಡಿ ಭದ್ರತಾ ಪಡೆಯನ್ನು ಸೇನೆಯ ಅಧೀನಕ್ಕೊಪ್ಪಿಸಲಾಗಿದೆ. ಗಡಿಯನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ. ದೇಶದ ಎಲ್ಲಾ ವಾಯು ನೆಲೆಗಳನ್ನು ಜಾಗ್ರತ ಸ್ಥಿತಿಗೆ ತರಲಾಗಿದೆ. ಭಾರತೀಯ ವಾಯು ಸೇನೆಯ ಸ್ಕ್ವಾಡ್ರನ್‌ಗಳು ಮುಂಚೂಣಿಯ ನೆಲೆಗಳಲ್ಲಿ ಸಿದ್ಧವಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಇವೆಲ್ಲ ಸಿದ್ಧತೆಯೊಡನೆ ಭಾರತ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ. ಗಡಿಯಿಂದ ಹಿಂದೆ ಸರಿಯಬೇಕೆಂದು ಆ ದೇಶಕ್ಕೆ ತಿಳಿಸಲಾಗಿದೆ. ಗಡಿಯಲ್ಲಿ ಸಮರ ಸಿದ್ಧತೆ ಮಾಡಿದ ಪಾಕಿಸ್ತಾನದ ಕ್ರಮಕ್ಕೆ ಪ್ರತಿಯಾಗಿ ಭಾರತ ಸೇನಾ ಜಮಾವಣೆ ಮಾಡಿರುವುದನ್ನು ಪಾಕಿಸ್ತಾನದ ಗಮನಕ್ಕೆ ತರಲಾಗಿದೆ. ಗಡಿಯಲ್ಲಿನ ಪರಿಸ್ಥಿತಿಯನ್ನು ರಶ್ಯ ಹಾಗೂ ಅಮೆರಿಕಗಳಿಗೂ ತಿಳಿಸಲಾಗಿದೆ.

ಗಡಿಯಲ್ಲಿ ಉದ್ರಿಕ್ತತೆಯನ್ನು ನಿರ್ಮಿಸುವ ಅನಗತ್ಯದ ಹಾಗೂ ಬೇಜವಾಬ್ದಾರಿಯ ಹೆಜ್ಜೆಯನ್ನು ಪಾಕಿಸ್ತಾನ ಇರಿಸಿದೆ ಎಂದೇ ಹೇಳಬೇಕಾಗಿದೆ. ಭಾರತಕ್ಕೆ ಇಂತಹ ಪ್ರತಿಕ್ರಮ ಅನಿವಾರ್ಯವಾಗಿತ್ತು. ಪಂಜಾಬಿನಲ್ಲಿ ಜನಾಂಗ ಮೂಲವಾದ ಕ್ಷೋಭೆ ಇರುವ ಹಿನ್ನೆಲೆಯಲ್ಲಿ ಅದು ತನ್ನ ಗಡಿಯನ್ನು ಅಭದ್ರವಾಗಿಯೂ ಅರಕ್ಷಿತವಾಗಿಯೂ ಬಿಟ್ಟುಬಿಡುವುದು ಅಸಾಧ್ಯವಾದ ಮಾತು. ಪಂಜಾಬಿನ ಪರಿಸ್ಥಿತಿಯೇ ಪಾಕಿಸ್ತಾನವನ್ನು ಒಂದು ದುಸ್ಸಾಹಸಕ್ಕೆ ಎಳಸುವಂತೆ ಮಾಡಿದ್ದಿರಬಹುದು. 1971ರ ಸೋಲಿಗೆ ಮುಯ್ಯಿ ತೀರಿಸಿಕೊಳ್ಳಲು ಅದು ಸಮಯ ಕಾಯುತ್ತಿರಬಹುದು. ಇದುವೇ ತಕ್ಕ ಸಮಯವೆಂದು ಅನಿಸಿರಬಹುದು.

ಆದರೆ ಯುದ್ಧವೊಂದು ನಡೆದರೆ ಆಗಬಹುದಾದ ಅನಾಹುತಗಳನ್ನೆಲ್ಲ ಈ ಉಪಖಂಡದ ವಿಚಾರಶೀಲರೆಲ್ಲರೂ ಮನನ ಮಾಡಬೇಕಾಗಿದೆ. ಅಂಥ ಪ್ರಸಂಗವೊಂದು ನಡೆದುಹೋದರೆ ಎರಡೂ ದೇಶಗಳ ಜನರಲ್ಲಿ ಉಳಿಯುವ ಕಹಿ ಭಾವನೆ ಒಂದು ಕಡೆಯಾದರೆ ಎರಡೂ ದೇಶಗಳಲ್ಲಿ ಸಾವಿರಾರು ತರುಣರು ಯುದ್ಧ ಕುಂಡಕ್ಕೆ ಬಲಿಯಾಗುವ ದಾರುಣ ದುರಂತ ಇನ್ನೊಂದೆಡೆ. ಆಗಬಹುದಾದ ನಾಗರಿಕರ ಸಾವು, ಸೊತ್ತು ನಾಶ ಕೂಡ ಕಮ್ಮಿಯಲ್ಲ.

ಯುದ್ಧ ನಡೆದರೆ ಗೆಲ್ಲುವೆವೆಂಬ ಹುಸಿಧೈರ್ಯ ಪಾಕಿಸ್ತಾನದವರಿಗಿರಬಹುದು. ಖಾಲಿಸ್ತಾನ ಬೇರೆಯಾಗಿ ಭಾರತ ಚಿಂದಿಯಾದೀತೆಂಬ ನಿರೀಕ್ಷೆಯಿರಬಹುದು. ಆದರೆ ಇದೆಲ್ಲವೂ ಕಾಲಗರ್ಭದಲ್ಲಿರುವ ವಿಚಾರಗಳು. ಇಂಥ ಹುಸಿ ನಿರೀಕ್ಷೆಗಳ ನೆರಳಿನಲ್ಲಿ ನೆರೆಯ ಬಲಾಢ್ಯ ದೇಶವೊಂದರೊಡನೆ ಕಾಲು ಕೆರೆದು ಜಗಳಕ್ಕಿಳಿಯುವ ಮೂರ್ಖತನ ಮಾತ್ರ ಆ ದೇಶಕ್ಕೇ ಗಂಡಾಂತರಕಾರಿಯಾದದ್ದು ಎನ್ನದೆ ವಿಧಿಯಿಲ್ಲ.

1971ರ ವಿದ್ಯಮಾನಗಳನ್ನೇ ಸ್ಥೂಲವಾಗಿ ಅವಲೋಕಿಸಿದರೆ ಅಂದು ಪಾಕಿಸ್ತಾನದ ಪ್ರಭುಗಳೇ ಪೂರ್ವ ಪಾಕಿಸ್ತಾನದಲ್ಲಿ ರಾಜಕೀಯ ತೀರ್ಮಾನಕ್ಕೆ ಬರಲಾಗದೆ ಭಾರತದ ಮೇಲೆ ಹರಿ ಹಾಯ್ದು ಅಪಾಯವನ್ನು ಮೈಮೇಲೆಳೆದು ಕೊಂಡದ್ದು ಕಂಡು ಬರುತ್ತದೆ. ಇಂದು ಇನ್ನೊಂದು ರೀತಿಯ ಪರಿಸ್ಥಿತಿಯಿದೆ. ಪಂಜಾಬಿನ ವಿದ್ಯಮಾನ ಪಾಕಿಸ್ತಾನಕ್ಕೆ ಯಾವ ಸಬೂಬನ್ನೂ ಒದಗಿಸದಿದ್ದರೂ ಆಸೆಯನ್ನು ಮಾತ್ರ ಕೆರಳಿಸಿದೆ.

ಯುದ್ಧ ನಡೆಯುವುದು ಮಾತ್ರ ಎರಡೂ ದೇಶಗಳ ದೃಷ್ಟಿಯಿಂದಲೂ ಹಿತವಲ್ಲ. ಉದ್ರಿಕ್ತತೆಯನ್ನು ಕೂಡಲೇ ಶಮನಿಸಬೇಕಾದ ಅಗತ್ಯವುಂಟು. ಪಾಕಿಸ್ತಾನಕ್ಕೆ ಬಾಯಲ್ಲಿ ನೀರೂರದಂತೆ ಪಂಜಾಬಿನ ಕ್ಷೋಭೆಗೆ ಬೇಗನೇ ರಾಜಕೀಯ ಪರಿಹಾರ ಹುಡುಕಬೇಕಾದ ಅಗತ್ಯ ಕೂಡ ಭಾರತ ಸರಕಾರದ್ದಾಗಿದೆ. ದೇಶದ ಪ್ರಜೆಗಳ ಹಿತದೃಷ್ಟಿಯಿಂದಲೂ ಇದು ಅನಿವಾರ್ಯ.

ಜನದನಿ

ರಸ್ತೆ ಕಾಮಗಾರಿ ತುರ್ತು ನಡೆಯಲಿ

ಪ್ರಿಯರೆ,

ಕಾರ್ಕಳ ನಗರದ ಜನಸಂಖ್ಯೆ 1981ರ ಜನಗಣತಿ ಪ್ರಕಾರ 22,000 ಹಾಗೂ ಕಾರ್ಕಳದಲ್ಲಿ 5,500 ಮನೆಗಳಿದ್ದರೂ ಕೂಡಾ ಕಾರ್ಕಳ ನಗರಕ್ಕೆ ಒಳಚರಂಡಿ ಯೋಜನೆಯನ್ನು ಹಿಂದಿನ ಸರಕಾರ ಜಾರಿಗೊಳಿಸಿದ್ದರೂ ಅದು ಕಳೆದ 1986 ರಿಂದ ಜಾರಿಗೊಂಡಿರುತ್ತದೆ. ಆದರೆ ಈ ಯೋಜನೆಯು ಒಂದೆರಡು ವರ್ಷದಲ್ಲಿ ಮುಗಿಯಲು ಆರ್ಥಿಕ ದೃಷ್ಟಿಯಿಂದ ಅಸಾಧ್ಯವೆಂಬುದು ಕಾರ್ಕಳದ ಬಳಕೆದಾರರಿಗೆ ಚೆನ್ನಾಗಿ ತಿಳಿದಿರುತ್ತದೆ. ಹಾಗೂ ಈ ಯೋಜನೆಯಿಂದಾಗಿ ಹೆಚ್ಚಿನ ಪ್ರಯೋಜನ ಹೊಂದುವವರು ಹೊಟೇಲು ಮಾಲಿಕರು ಹಾಗೂ ಕೆಲವು ಮಹಡಿಗಳನ್ನು ಕಟ್ಟುವವರು ಮಾತ್ರ.

ಕಾರ್ಕಳದಲ್ಲಿ ಒಂದೇ ಒಂದು ರಸ್ತೆ ಅಸಂಘಟಿತಯದಿಂದ ಜೋಡುರಸ್ತೆಯವರೆಗೆ ಇರುವುದರಿಂದ ಹಾಗೂ ಇದು ಸುಮಾರಾಗಿ 150 ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದು ಅಗಲಕಿರಿದಾಗಿರುವುದರಿಂದಲೂ ರಸ್ತೆಯ ಕೆಲವು ಕಡೆಗಳಲ್ಲಿ ಚರಂಡಿಯೇ ಇಲ್ಲದೆ ರಸ್ತೆಯ ಮೇಲೆಯೇ ಕೆಲವು ಕಟ್ಟೋಣಗಳು ಹಲವಾರು ವರ್ಷಗಳ ಹಿಂದೆಯೇ ಕಟ್ಟಲ್ಪಟ್ಟಿರುವುದರಿಂದಲೂ ಹಾಗೂ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಾ ಹೋಗುವುದರಿಂದಲೂ ಹಾಗೂ 5-7-1985ರಿಂದ ಏಕಮುಖ ರಸ್ತೆಯು ಅನಿವಾರ್ಯವಾಗಿ ಜಾರಿಗೊಂಡಿರುವುದರಿಂದಲೂ ಒಳಚರಂಡಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಸಂಬಂಧಪಟ್ಟ ಇಲಾಖೆಯವರು ಕೆಲವು ನಿಬಂಧನೆಗಳನ್ನು ಕಾರ್ಯರೂಪಕ್ಕೆ ತರದಿದ್ದಲ್ಲಿ ಜನಜೀವನ ಅಸ್ತವ್ಯಸ್ತಗೊಳ್ಳುವುದರಲ್ಲಿ ಸಂಶಯವಿಲ್ಲ. ಈಗ ಮುಖ್ಯ ರಸ್ತೆ ಬಿಟ್ಟು ಒಳರಸ್ತೆಗಳಲ್ಲಿ ಈ ಕಾಮಗಾರಿ ಆಗುತ್ತಿರುವುದನ್ನು ಹಾಗೂ ಅದರ ಸಾಧಕ ಬಾಧಕಗಳನ್ನು ಬಳಕೆದಾರರು ಗಮನಿಸುತ್ತಾ ಬಂದಿರುತ್ತಾರೆ. ಬರುವ ಫೆಬ್ರವರಿ ತಿಂಗಳಿನಿಂದ ಮುಖ್ಯ ರಸ್ತೆಯಲ್ಲಿ ಕಾಮಗಾರಿ ಪ್ರಾರಂಭಮಾಡುವರೆಂಬುದಾಗಿ ತಿಳಿದು ಬರುತ್ತದೆ. ರಾಜರಸ್ತೆಯಲ್ಲಿ ಕಾಮಗಾರಿ ಸಂಬಂಧಪಟ್ಟ ಇಲಾಖೆಯವರು ಅಥವಾ ಅವರು ವಹಿಸಿಕೊಟ್ಟ ಕಂಟ್ರಾಕ್ಟುದಾರರು ಹೆಚ್ಚಿನ ಸಿಬ್ಬಂದಿ ನೇಮಿಸಿ ದಿನಕ್ಕೆ ಎರಡು ಶಿಫ್ಟಿನಂತೆ ಕಾಮಗಾರಿಯನ್ನು ತ್ವರಿತಗತಿಯಲ್ಲಿ ನಡೆಸಿಕೊಂಡು ಹೋದಲ್ಲಿ ಮಾತ್ರ ರಸ್ತೆಯನ್ನು ಬಳಸುವ ಎಲ್ಲಾ ವಿಧದ ವಾಹನ ಚಾಲಕರು ಹಾಗೂ ಪಾದಚಾರಿಗಳು ನೆಮ್ಮದಿಯಿಂದ ರಸ್ತೆಯಲ್ಲಿ ಸಂಚರಿಸಬಹುದು ಇಲ್ಲದಿದ್ದಲ್ಲಿ ಆಮೆನಡಿಗೆಯಲ್ಲಿ ಕೆಲಸ ಮುಖ್ಯರಸ್ತೆಯಲ್ಲಿ ಸಾಗಿದರೆ ತಿಂಗಳುಗಟ್ಟಲೆ ಕಾಮಗಾರಿ ನೆನೆಗುದಿಗೆ ಬಿದ್ದು ಜನಜೀವನ ಅಸ್ತವ್ಯಸ್ತವಾಗಬಹುದು.

ಆದುದರಿಂದ ಕಾರ್ಕಳ ರಸ್ತೆಯ ಹಿನ್ನೆಲೆಯನ್ನು ಗಮನಿಸಿ, ಸಂಬಂಧಪಟ್ಟ ಇಲಾಖೆಯವರು ಅನಂತಶಯನದಿಂದ ಸಾಲ್ಮರದ ವರೆಗೆ ಅಗಲ ಕಿರಿದಾದ ಹಾಗೂ ಒಂದೇ ಒಂದು ರಾಜ ರಸ್ತೆಯ ಕಾಮಗಾರಿಯನ್ನು ಪ್ರಾರಂಭಮಾಡುವಾಗ ತ್ವರಿತಗತಿಯಲ್ಲಿ ಕಾಮಗಾರಿಯನ್ನು ಪೂರೈಸಿ ಎಲ್ಲಾ ತರದ ರಸ್ತೆಬಳಕೆದಾರರ ಹಿತಾಸಕ್ತಿಯನ್ನು ಕಾಪಾಡುವರಾಗಿ ಆಶಿಸುವ, ಬಳಕೆದಾರರು.

ಕಾಮಗಾರಿ ಮುಗಿದ ಬಳಿಕ ಹೆಚ್ಚಿಗೆ ಉಳಿದ ಮಣ್ಣಿನ ರಾಶಿಯನ್ನು ಮಾರ್ಗದ ಮಧ್ಯದಲ್ಲಿಯೇ ತಿಂಗಳುಗಟ್ಟಲೆಹಾಗೆಯೇ ಬಿಟ್ಟು ಬಿಡುವುದರ ಉದ್ದೇಶ ಏನೆಂಬುದೇ ಬಳಕೆದಾರರಿಗೆ ತಿಳಿಯುವುದಿಲ್ಲ. ಮಳೆಗಾಲದಲ್ಲಿ ತೋಡಿದ ಒಳಚರಂಡಿ ಕಣಿಮ ಮಣ್ಣು ತಗ್ಗಿದಾಗ ತುಂಬಿಸಲು ಈಗ ಹೆಚ್ಚಿಗೆ ಉಳಿದ ಮಣ್ಣನು ಹಾಗೆಯೇ ರಸ್ತೆ ಮಧ್ಯದಲ್ಲಿ ಬಿಡುವುದು ಸರಿಯೇ ಎಂಬುದಾಗಿ ಬಳಕೆದಾರರು ಪ್ರಶ್ನಿಸುತ್ತಿದ್ದಾರೆ?

—ಬಳಕೆದಾರರ ವೇದಿಕೆ
ಕಾರ್ಕಳ

ಸತ್ಯಕ್ಕೆ ದೂರ

ಪ್ರಿಯರೆ,

ನಿಮ್ಮ ಪತ್ರಿಕೆಯ 21-1-87ರ ಸಂಚಿಕೆಯ ಕೊನೆಯ ಪುಟದಲ್ಲಿ "ಬ್ರಹ್ಮಾವರದಲ್ಲಿ ನಕಲಿ ಮತದಾನ ಯತ್ನ" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ವರದಿ ಸತ್ಯಕ್ಕೆ ದೂರವಾದುದು. ಘಟನೆ ನಡೆಯಿತೆನ್ನಲಾದ ಸ್ಥಳದಲ್ಲಿ ಅಂತಹ ಯಾವುದೇ ಘಟನೆ ನಡೆದಿಲ್ಲ. ಇದು ನನ್ನ ಹಾಗೂ ಪಕ್ಷದ ಘನತೆಯನ್ನು ತಗ್ಗಿಸುವರೆ ನಡೆಸಿದ ಯತ್ನವಾಗಿರುತ್ತದೆ. ಇದು ಖಂಡನೀಯ.

—ಕಿರಣ್ ಹೆಗ್ಡೆ, ಕೊಕ್ಕರ್ಣೆಲ್
ಕೊಕ್ಕರ್ಣೆಲ್
22-1-87

(ಸಂಬಂಧಿಸಿದ ಈ ವರದಿಯಲ್ಲಿ ಆಗಿರುವ ತಪ್ಪುಗಳ ವಿರುದ್ಧ ಕ್ರಮಕೈಗೊಂಡಿದ್ದೇವೆ. (ಸಂಪಾದಕ)

ಚುನಾವಣಾ ಫಲಿತಾಂಶದ ಕಿರು ವಿಶ್ಲೇಷಣೆ

ರಾಜ್ಯದಲ್ಲಿ ಜನತಾ ಪಕ್ಷ ಕಳಕೊಳ್ಳುತ್ತಿರುವ ಸುಸಂದರ್ಭ

ಕರ್ನಾಟಕದಲ್ಲಿ ಇತ್ತೀಚೆಗೆ ನಡೆದಿರುವ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ಫಲಿತಾಂಶಗಳ ಬಗ್ಗೆ ವಿಮರ್ಶೆ ನಡೆಸುವ ಮೊದಲು ಜನತಾ ಪಕ್ಷದ ಹಿನ್ನೆಲೆ, ರಾಜ್ಯದಲ್ಲಿ ಅದು ಅಧಿಕಾರಕ್ಕೆ ಬಂದ ಸಂದರ್ಭ, ಆ ಮೇಲಿನ ಬೆಳವಣಿಗೆಗಳು ಇತ್ಯಾದಿಗಳ ಬಗ್ಗೆ ಅವಲೋಕಿಸುವುದು ಅಗತ್ಯ. ತುರ್ತು ಪರಿಸ್ಥಿತಿಯ ಕೊನೆಗೆ ಜನಿಸಿ, ತುರ್ತು ಪರಿಸ್ಥಿತಿಯ ಅತಿರೇಕದ ವಿರುದ್ಧದ ನಕಾರಾತ್ಮಕ ಮತ ಪಡೆದು ಕೇಂದ್ರದಲ್ಲಿ ಜನತಾಪಕ್ಷವು ಅಧಿಕಾರಕ್ಕೆ ಬಂತು. ಪರಿಸ್ಥಿತಿಯ ಒತ್ತಡದಿಂದಾಗಿ ಕೆಲವು ಪಕ್ಷಗಳು ಮತ್ತು ಗುಂಪುಗಳು ಸೇರಿ ಒಂದಾಗಿ ಜನತಾ ಪಕ್ಷ ಹುಟ್ಟಿ ಅಧಿಕಾರಕ್ಕೆ ಬಂದ ಮೇಲೆ ಆಂತರಿಕ ವೈರುಧ್ಯ ಮತ್ತು ಅಧಿಕಾರಕ್ಕಾಗಿ ನಡೆದ ಆಂತರಿಕ ಕಲಹಗಳಿಂದ ಅಧಿಕಾರಕ್ಕೆ ಬಂದಷ್ಟೇ ವೇಗದಿಂದ ಕೇಂದ್ರದಲ್ಲಿದ್ದ ಜನತಾ ಸರಕಾರವು ಅಧಿಕಾರವನ್ನು ಕಳೆದು ಕೊಂಡಿತು. ಇದರಲ್ಲಿ ಇಂದಿರಾ ಗಾಂಧಿಯ ಕೈವಾಡವೂ ಇತ್ತು. ಒಮ್ಮೆ ಇಂದಿರಾ ಕಾಂಗ್ರೆಸ್ಸಿಗೆ ಶಿಕ್ಷೆಯಿತ್ತ ಜನ, ಜನತಾ ಸರಕಾರದ ವೈಫಲ್ಯದಿಂದ ಬೇಸತ್ತು ಮತ್ತೆ ಇಂದಿರಾ ಕಾಂಗ್ರೆಸ್ಸಿನತ್ತ ವಾಲಿದರು. ಇಂದಿರಾ ಗಾಂಧಿಯ ಭಯ ದೂರವಾಯಿತೆಂಬ ಭ್ರಮೆ ಜನತಾ ಪಕ್ಷದ ಒಗ್ಗಟ್ಟಿಗೆ ಮಾರಕವಾಯಿತು. ರಾಷ್ಟ್ರದಾದ್ಯಂತ "ಜನತಾ ಪ್ರಯೋಗ" ಎಂದಾಗ ಜನ ನಗುವಂತಾಯಿತು.

ಕರ್ನಾಟಕ ರಾಜ್ಯದಲ್ಲಿ ಮುಖ್ಯವಾಗಿ ಸಂಸ್ಥಾ ಕಾಂಗ್ರೆಸ್ ಮತ್ತು ಜನಸಂಘ ಹಾಗೂ ಕೆಲವು ಸಮಾಜ ವಾದಿಗಳಿಂದ ರೂಪಿತವಾಗಿದ್ದ ಜನತಾ ಪಕ್ಷವು ಮುಖ್ಯವಾಗಿ ಲಿಂಗಾಯತ ಮತ್ತು ಒಕ್ಕಲಿಗ ಕೋಮಿನವರ ಹಾಗೂ ಶ್ರೀಮಂತ ಭೂಮಾಲಕರ ಮತ್ತು ಶ್ರೀಮಂತ ರೈತರ ಪಕ್ಷವಾಗಿಯೇ ಜನರಿಗೆ ಕಾಣುತ್ತಿತ್ತು.

ಎಂ. ಕೆ.

ಗುಂಡೂರಾವ್ ಅಧಿಕಾರದ ಕಾಲದಲ್ಲಿ ಉಳಿದೆಲ್ಲಾ ವಿರೋಧ ಪಕ್ಷಗಳು ಮತ್ತು ಸಂಘಟನೆಗಳು ಜನಪರ ಹೋರಾಟ ನಡೆಸುತ್ತಿದ್ದಾಗ ಜನತಾ ಪಕ್ಷ ವಿಧಾನ ಸಭೆಯೊಳಗೆ ಗದ್ದಲ ಮಾಡುವುದರಲ್ಲಷ್ಟೆ ತೃಪ್ತಿ ಪಟ್ಟು ಕೊಂಡಂತಿತ್ತು. ಗುಂಡೂರಾವ್ ಸರಕಾರ ಅಧಿಕಾರದಿಂದ ಉರುಳುವ ಕೆಲವೇ ವಾರಗಳ ಮೊದಲಷ್ಟೆ ಜನತಾ ಪಕ್ಷವು ಉಳಿದ ವಿರೋಧ ಪಕ್ಷಗಳೊಂದಿಗೆ ಸೇರಿತ್ತು. ಜನತಾ ಪಕ್ಷಕ್ಕೆ ಜಾತೀಯ ಆಧಾರದಲ್ಲಿ ಆದರೂ ಉಳಿದ ವಿರೋಧ ಪಕ್ಷಗಳಿಂದ ದೊಡ್ಡ ನೆಲೆ ಇದ್ದುದರಿಂದ ಇತರ ಪಕ್ಷಗಳಿಂದ ಅಧಿಕ ಸ್ಥಾನಗಳನ್ನು ವಿಧಾನ ಸಭಾ ಚುನಾವಣೆಯಲ್ಲಿ ಪಡೆಯಿತು. ಜನತಾ ಪಕ್ಷದೊಂದಿಗೆ ಕ್ರಾಂತಿ ರಂಗವು ಸೇರಿಕೊಂಡದ್ದರಿಂದ ಮತ್ತು ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಹೊಂದಾಣಿಕೆ ಇದ್ದುದರಿಂದ ಜನತಾ ಪಕ್ಷವು ಮೇಲ್ಜಾತಿ ಮತ್ತು ಮೇಲ್ ವರ್ಗಗಳ ಪಕ್ಷ ಎಂಬುದನ್ನು ಹೋಗಲಾಡಿಸುವುದೂ ಸ್ವಲ್ಪ ಮಟ್ಟಿಗೆ ಸಾಧ್ಯವಾಯಿತು. ಗುಂಡೂರಾಯರ ಕಾಲದ ದುರಾಡಳಿತದಿಂದ ಬೇಸತ್ತಿದ್ದ ಜನಕ್ಕೆ ಬದಲಿಯೂ ಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ಹೆಚ್ಚಿಗೆ ಸ್ಥಾನ ಗಳಿಸಿದ್ದ ಜನತಾ ರಂಗ (ಜನತಾ ಪಕ್ಷ ಮತ್ತು ಕ್ರಾಂತಿ ರಂಗಗಳು ಸೇರಿ ಆಗಿದ್ದು) ವು ಭಾ. ಜ. ಪ. ಮತ್ತು ಉಭಯ ಕಮ್ಯೂನಿಸ್ಟ್ ಪಕ್ಷಗಳ ಬೆಂಬಲದಿಂದ ಅಧಿಕಾರ ಸ್ಥಾಪಿಸುವುದು ಸಾಧ್ಯವಾಯಿತು. ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಸರಕಾರವು ಅಸ್ತಿತ್ವಕ್ಕೆ ಬಂತು. ತಮಗೇ ಬಹುಮತವಿಲ್ಲದ್ದರಿಂದ ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು, ಜನತೆಗೆ ಸರಕಾರದೊಂದಿಗೆ ನೇರ ಸಂಪರ್ಕದ ಅವಕಾಶ ಕಲ್ಪಿಸಿ ಕೊಡುವುದು, ಜನತೆಯ ಸಮಸ್ಯೆಗಳ ಬಗ್ಗೆ ಸ್ಪಂದಿಸುವುದು ಇವೇ ಮೊದಲಾದುವು ಜನತಾ ಪಕ್ಷದ ಸರಕಾರದ ಮೊದಲ ಹಂತದ ಕಾರ್ಯ ವೈಖರಿಯಾದುವು. ರಾಮಕೃಷ್ಣ ಹೆಗಡೆಯವರ ಚಾಣಾಕ್ಷತೆ ಮತ್ತು ರಾಜಕೀಯ ನೈಪುಣ್ಯತೆ, ಇದರೊಂದಿಗೆ ಕಾಂಗ್ರೆಸ್ ಸೋತರೂ ಜವಾಬ್ದಾರಿಯುತ ವಿರೋಧ ಪಕ್ಷವಾಗಿರುವುದರ ಬದಲು ಏನೇನೋ ಗದ್ದಲ ಮಾಡುತ್ತಿದ್ದುದು, ಬಂಗಾರಪ್ಪನವರು ಜನತಾದಿಂದ ದೂರ ಸರಿದುದರಲ್ಲಿ ಜನತೆ ಸಂದರ್ಭಸಾಧಕತನವನ್ನು ಕಂಡುಕೊಂಡುದು, ಭಾ. ಜ. ಪ ದವರ ಬ್ಲಾಕ್ ಮೈಲ್ ರಾಜಕೀಯ–ಇವೆಲ್ಲಾ ಹೆಗಡೆಯವರ ನೇತೃತ್ವದ ಜನತಾ ಸರಕಾರಕ್ಕೆ ಜನತೆಯ ಅನುಕಂಪ, ಬೆಂಬಲಗಳನ್ನು ದೊರಕಿಸಿ ಕೊಡುವುದಕ್ಕೆ ಸಹಾಯವಾಯಿತು.

ಜನತಾ ಪಕ್ಷಕ್ಕೆ ಬಹುಮತ

ಮೇಲೆ ಹೇಳಿರುವ ಹಿನ್ನೆಲೆಯಲ್ಲಿ 1985ರಲ್ಲಿ ಜನತಾ ಪಕ್ಷವು ಮತ್ತೆ ವಿಧಾನ ಸಭಾ ಚುನಾವಣೆಯನ್ನೆದುರಿಸಿತು. ಗುಂಡೂರಾಯರ ಕಾಲದ ದುರಾಡಳಿತವನ್ನು ಇನ್ನೂ ಮರೆತಿರದ ಜನ, ಅಧಿಕಾರವನ್ನು ಕಳೆದುಕೊಂಡ ಮೇಲೂ ರಾಜ್ಯದಲ್ಲಿ ಕಾಂಗ್ರೆಸ್ಸಿನ ಅಸಮರ್ಥತೆ ಹಾಗೂ ಭಾಜಪದ ಬ್ಲ್ಯಾಕ್ ಮೈಲ್ ರಾಜಕೀಯದಿಂದ ಬೇಸತ್ತು, ಭದ್ರ ಸರಕಾರ ಬೇಕೆಂಬ ದೃಷ್ಟಿಯಿಂದ ಜನತಾ ಪಕ್ಷಕ್ಕೆ ಬೆಂಬಲವಿತ್ತಿತು. ಉಭಯ ಕಮ್ಯೂನಿಸ್ಟ್ (ಸಿಪಿಐ(ಎಂ) ಮತ್ತು ಸಿಪಿಐ) ಪಕ್ಷಗಳೊಂದಿಗೆ ಹೊಂದಾಣಿಕೆ ಇದ್ದುದರಿಂದ ಜನತಾ ಪಕ್ಷಕ್ಕೆ ಕಾರ್ಮಿಕರ ಹಾಗೂ ಹಲವೆಡೆಗಳಲ್ಲಿ ಹಳ್ಳಿಯ ಬಡವರ ಬೆಂಬಲವೂ ದೊರೆಯಿತು. ಜನತಾಪಕ್ಷಕ್ಕೇ ಬಹುಮತ ದೊರೆಯಿತು, ಈ ವಿಜಯವನ್ನು ರಾಮಕೃಷ್ಣ ಹೆಗಡೆಯವರ ವೈಯಕ್ತಿಕ ವಿಜಯವೆಂದೂ ಸಾರಲಾಯಿತು. ಜನತಾ ಪಕ್ಷಕ್ಕೇದೊರೆತವಿಜಯಕ್ಕೆಹೆಗಡೆಯವರೂ ಕಾರಣರಾಗಿರಬಹುದಾದರೂ ಜನ ಜನತಾ ಪಕ್ಷವನ್ನು ಏಕೆ ಬೆಂಬಲಿಸಿದರು ಮತ್ತು ಯಾವಹಿನ್ನೆಲೆಯಲ್ಲಿ ಜನತಾ ಪಕ್ಷಕ್ಕೆ ಬಹುಮತ ದೊರೆಯಿತೆಂಬ ಅಂಶವನ್ನು ಜನತಾ ಪಕ್ಷದವರು ಮರೆಯುವಂತಾಯಿತು.

ಇದರಿಂದಾಗಿಯೇ 1983ರಿಂದ 85ರ ತನಕ ಅಧಿಕಾರ ನಡೆಸಿದ್ದಕ್ಕಿಂತ ತೀರಾ ಭಿನ್ನ ರೀತಿಯಲ್ಲಿ ರಾಮಕೃಷ್ಣ ಹೆಗಡೆಯವರೂ, ಜನತಾ ಪಕ್ಷದವರೂ, ಅವರ ಸರಕಾರವೂ ವರ್ತಿಸುವುದು ಪ್ರಾರಂಭವಾಯಿತು. ಜವಾಬ್ದಾರಿಯಿಂದ ವರ್ತಿಸುತ್ತಿದ್ದು, ಜನತೆಯೊಂದಿಗೆ ಸಂಪರ್ಕವಿರಿಸಿ ಅವರ ಸಮಸ್ಯೆಗಳ ಬಗ್ಗೆ ಸ್ಪಂದಿಸುತ್ತಿದ್ದ ಜನತಾ ಸರಕಾರವು ಬೇಜವಾಬ್ದಾರಿಯಿಂದ ವರ್ತಿಸುವುದೂ, ಜನತೆಯಿಂದ ದೂರ ಸರಿದು ಅವರ ಸಮಸ್ಯೆಗಳ ಬಗ್ಗೆ ಸ್ಪಂದಿಸದಿರುವುದೂ ಪ್ರಾರಂಭವಾಯಿತು. ಮುಖ್ಯಮಂತ್ರಿಗಳೂ, ಉಳಿದ ಮಂತ್ರಿಗಳೂ ದಿನಾ ಜನ ಸಾಮಾನ್ಯರನ್ನು ಭೇಟಿಯಾಗಿ ಮನವಿ ಪಡೆಯುವುದು (ತೋರಿಕೆ ಮಾತ್ರಕ್ಕಾಗಿಯಾದರೂ ಮೊದ ಮೊದಲು ನಡೆಯುತ್ತಿದ್ದ ಕಾರ್ಯಕ್ರಮ) ದೂರವಾಯಿತು. ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವ ಬದಲು ಖಾಸಗಿ ಕೆಲಸಗಳನ್ನು ಮಾಡಿಸಿಕೊಡುವುದೇ ಜನತಾ ಶಾಸಕರುಗಳ ಮುಖ್ಯ ಕೆಲಸವಾಯಿತು.

ಇದರೊಂದಿಗೆ ಅಧಿಕಾರ ಶಾಹಿಗಳ ಕಾರು ಭಾರವೂ ಹೆಚ್ಚಿತು. ಲಂಚಾವತಾರದ ಕಾಟ ಸರಾಗವಾಗೇ ಮುಂದುವರಿಯಿತು. ಜನತಾ ಮಂತ್ರಿಗಳೂ, ಶಾಸಕರುಗಳೂ ಅಧಿಕಾರ ಶಾಹಿ ವರ್ತನೆ ಪ್ರಾರಂಭಿಸಿದರು. ಹೆಗಡೆಯವರ ಮೇಲಿನ ಭ್ರಷ್ಟಾಚಾರದ ಆರೋಪಗಳೂ (ಇನ್ನೂ ಸಾಬೀತಾಗಿಲ್ಲವಾದರೂ), ಅವರ ರಾಜಿನಾಮೆ ಸೂತ್ರ ಇವೆಲ್ಲಾ ಬುದ್ಧಿ ಜೀವಿ ಮತ್ತು ಮಧ್ಯಮ ವರ್ಗದ ಒಂದು ವಿಭಾಗದ ಮಧ್ಯೆ ಜನತಾ ಸರಕಾರದ ಬಗ್ಗೆ ಇದ್ದ ಅಭಿಮಾನ ಅನುಕಂಪಗಳನ್ನು ಕಡಿಮೆ ಮಾಡಿದುವು. ತನ್ನ ಸ್ವಂತ ಶಕ್ತಿ ಹಾಗೂ ಹೆಗಡೆಯವರ ವರ್ಚಸ್ಸನ್ನು ಅತಿಯಾಗಿ ನಂಬಿದ ಜನತಾ ಪಕ್ಷವು ಕಮ್ಯೂನಿಸ್ಟ್ ಪಕ್ಷಗಳಿಂದಲೂ ದೂರವಾಯಿತು. ಕೆಳ ಹಂತದಿಂದಲೇ, ಅಂದರೆ ಗ್ರಾಮ ಮಟ್ಟದಿಂದಲೇ ಸಂಘಟನೆಯನ್ನು ಕಟ್ಟಿ ಜನರನ್ನು ಪಕ್ಷದ ಹಾಗೂ ಸರಕಾರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುವ ಬದಲು ರಾಮಕೃಷ್ಣ ಹೆಗಡೆಯವರಿದ್ದರೆ ಸಾಕೆಂಬ ಭ್ರಮೆಯಲ್ಲಿ ಜನತಾ ಪಕ್ಷವು ಮುಳುಗಿತು. ಅಧಿಕಾರದ ತುಣುಕಿಗಾಗಿ ಪಕ್ಷದೊಳಗೆ ಗುಂಪು ಕಲಹ ತೀವ್ರವಾಯಿತು. ಜನತೆಯೊಂದಿಗೆ ಸಂಪರ್ಕವಿರಿಸಿಕೊಳ್ಳುವ ಬದಲು ಹೆಚ್ಚಿನ ಶಾಸಕರುಗಳೂ ತಾಲೂಕು ಮತ್ತು ಜಿಲ್ಲಾ ಮುಂದಾಳುಗಳೆನಿಸಿದವರೂ ಬೆಂಗಳೂರಿಗೆ ಧಾವಿಸುವುದೇ ಹೆಚ್ಚಾಯಿತು. ಜನತಾ ಸರಕಾರವು ಕೆಲವೊಂದು ಉತ್ತಮ ಕೆಲಸ (ಉದಾ: ಕುಡಿಯುವ ನೀರಿನ ವ್ಯವಸ್ಥೆ, ಉಚಿತ ಪುಸ್ತಕ ವಿತರಣೆ, ರೈತರಿಗೆ ಸೌಲಭ್ಯ ಇತ್ಯಾದಿ)

> "ಕಾಂಗ್ರೆಸ್, ಜನತಾ ಪಕ್ಷಗಳೆರಡೂ ಮೂಲಭೂತವಾಗಿ ಒಂದೇ ಎಂಬುದನ್ನು ಜನತಾ ಪಕ್ಷದ ನಾಲ್ಕು ವರ್ಷದ ಆಡಳಿತವು ತೋರಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಪ್ರಸ್ತುತ ರಾಜ್ಯದಲ್ಲಿ ಸ್ವಲ್ಪ ಮಟ್ಟಿಗೆ ನಿಷ್ಕ್ರಿಯವಾಗಿರುವ ಎಡಪಕ್ಷ ಮತ್ತು ಸಂಘಟನೆಗಳು ತುರ್ತಾಗಿ ಕಾರ್ಯೋನ್ಮುಖವಾಗಬೇಕಾದ ಚಾರಿತ್ರಿಕ ಅವಶ್ಯಕತೆ ಇದೆ".

ಗಳನ್ನು ಮಾಡಿತಾದರೂ, ಕಾಂಗ್ರೆಸ್ಸಿಯೂ ಸಾಲ ಮೇಳವೂ ಸೇರಿದಂತೆ ಹೀಗೆಯೇ ಕೆಲವೊಂದು ಕೆಲಸ ಮಾಡಿದ್ದರಿಂದ ಈ ಎರಡು ಪಕ್ಷಗಳ ಮಧ್ಯೆ ಜನತೆಗೆ ವಿಶೇಷ ವ್ಯತ್ಯಾಸವು ಕಂಡು ಬರಲಿಲ್ಲ. ಇದರೊಂದಿಗೆ ಕಾಂಗ್ರೆಸ್ಸಿಗೆ ದೀರ್ಘಕಾಲದ ಚರಿತ್ರೆ ಇದ್ದು, ಕೇಂದ್ರದಲ್ಲಿಯೂ ಕಾಂಗ್ರೆಸ್ಸಿಯದ್ದೆ ಅಧಿಕಾರವಿರುವುದರಿಂದ ಹೆಚ್ಚಿಗೆ ಪ್ರಚಾರ, ಸಂಘಟನೆ ಬೇಕಿಲ್ಲ. ಜನತಾ ಪಕ್ಷವಾದರೆ ಒಂದು ಗುಂಪು ಆಗಿರುವುದರಿಂದ ಸಂಘಟನೆ ಚರಿತ್ರೆಗಳನ್ನು ಬೆಳೆಸಲು ಗಮನವೀಯಬೇಕಿತ್ತು. ಆದರೆ ಇವೆರಡಕ್ಕೂ ಗಮನ ವಿತ್ತುದು ಕಂಡು ಬಂದಿಲ್ಲ.

ಮತ್ತೆ ಕಾಂಗ್ರೆಸ್ಸಿಯತ್ತ ಒಲವು

ಕಾಂಗ್ರೆಸ್ಸಿಯ ರಾಜ್ಯ ಮುಖಂಡತ್ವ ಹರಿಹಂಚಿಹೋಗಿದ್ದರೂ ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಜನತಾಕ್ಕೆ ಬೆಂಬಲವಿತ್ತಿದ್ದ ಒಂದು ವಿಭಾಗ ಮತ್ತೆ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಬೆಂಬಲವಿತ್ತಿತು. ಭಾಜಪಕ್ಕೆ ಹೆಚ್ಚಿನ ಸ್ಥಾನಗಳೂ ದೊರೆಯದಿದ್ದರೂ, ಅದು ದ. ಕ. ಜಿಲ್ಲೆಯಂತಲ್ಲಿ ಸಾಕಷ್ಟು ಮತ ಪಡೆದು ಜನತಾಕ್ಕೆ ಒದೆತವಿತ್ತಿತು. ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಹೊಂದಾಣಿಕೆ ಇರದಿದ್ದುದರೂ ಕಾಂಗ್ರೆಸ್ ವಿರುದ್ಧದ ಮತಗಳ ವಿಭಜನೆಗೆ ಕಾರಣವಾಯಿತು. ಈ ಎಲ್ಲಾ ಅಂಶಗಳು ಸೇರಿ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ (ಹಾಗೂ ಮಂಡಲ ಪಂಚಾಯತ್ ಚುನಾವಣೆಯಲ್ಲೂ) ಜನತಾ ಪಕ್ಷವು ನಿರೀಕ್ಷಿಸಿದಷ್ಟು ದೊಡ್ಡ ಪ್ರಮಾಣದಲ್ಲಿ ಜಯ ದೊರೆಯದಂತೆ ಮಾಡಿದವು. ರಾಜ್ಯದಲ್ಲಿ ಮತ್ತೆ ಅಧಿಕಾರ ಪಡೆಯುವತ್ತ ಕಾಂಗ್ರೆಸ್ ಮುಂದುವರೆಯಲು ಜನತಾ ಪಕ್ಷ ಮತ್ತು ಅದರ ಸರಕಾರ ಅನುವು ಮಾಡಿಕೊಡುತ್ತಿವೆ ಎಂಬುದು ಚುನಾವಣಾ ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ಎಲ್ಲಾ ಶ್ರಮ ಜೀವಿ ವರ್ಗಗಳವರ ಮತ್ತು ಜನಸಾಮಾನ್ಯರ ಬದುಕಿನ ಪ್ರಶ್ನೆಗಳ ಪರಿಹಾರಕ್ಕಾಗಿ ವ್ಯಾಪಕವಾದ ಹೋರಾಟಗಳನ್ನು ನಡೆಸಿ, ಈ ಜನತೆಯಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ, ತಮ್ಮ ಸ್ವಂತ ಶಕ್ತಿಯನ್ನು ವೃದ್ಧಿಸದಿದ್ದಲ್ಲಿ ಎಡ ಪಕ್ಷಗಳೂ ಮುನ್ನಡೆಯಲಾರವು ಎಂಬ ಅಂಶವನ್ನೂ ಈ ಚುನಾವಣಾ ಫಲಿತಾಂಶಗಳು ಎತ್ತಿ ತೋರಿಸಿವೆ.

ಅಧಿಕಾರಕ್ಕೆ ಬಂದ ಮೇಲೆ, ತಾನು ಅಧಿಕಾರಕ್ಕೆ ಬಂದಿರುವ ಹಿನ್ನೆಲೆಯನ್ನು ಅರ್ಥಮಾಡಿಕೊಂಡು, ಎಡ ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿ ಸಂಘಟನೆಗಳೊಂದಿಗೆ ಹೊಂದಾಣಿಕೆ, ಒಗ್ಗಟ್ಟನ್ನು ಮುಂದುವರಿಸಿ, ತನ್ನ ಸಂಘಟನೆಯನ್ನು ಸರಿಯಾಗಿ ಕಟ್ಟಿ ಬೆಳೆಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಬಂದಿದ್ದರೆ ಜಿಲ್ಲಾ ಹಾಗೂ ಪಂಚಾಯತ್ ಚುನಾವಣೆಗಳ, ಫಲಿತಾಂಶ ಬೇರೆಯೇ ಆಗುತ್ತಿತ್ತು. ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರಕಾರಗಳು ಈ ದಿಸೆಯಲ್ಲಿ ಸಾಧಿಸಿದ್ದು ಗಮನಾರ್ಹ. ಈ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದು ಅಧಿಕಾರ ನಡೆದಿರುವ ಸುಮಾರು ಹತ್ತು ವರ್ಷಗಳ ಕಾಲಾವಧಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಡೆದಿರುವ ಎಲ್ಲ ಚುನಾವಣೆಗಳಲ್ಲಿ ಎಡರಂಗಗಳು ಅದ್ಭುತ ವಿಜಯ ಸಾಧಿಸಿವೆ. ಇಲ್ಲಿಯಜನತಾ ಜನತಾ ಇದರಿಂದ ಪಾಠ ಕಲಿಯಬಹುದಿತ್ತು; ಇನ್ನೂ ಕಲಿಯಬೇಕಾಗಿದೆ. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ತನ್ನ ಸ್ವಂತ ಶಕ್ತಿಯಿಂದ (ಬೇರಾವ ಪಕ್ಷಗಳೊಂದಿಗೂ ಹೊಂದಾಣಿಕೆ ಇಲ್ಲದೆ) ತನ್ನ ಪಕ್ಷಕ್ಕೇ ಒಟ್ಟು ಬಹುಮತ ಬಂದಿದೆಯೆಂದು ಜನತಾ ಪಕ್ಷವು ಹೆಮ್ಮೆ ಪಡುವ ಸಾಧ್ಯತೆ ಇದೆ. ಆದರೆ ಈಗಿನ ರೀತಿಯಲ್ಲಿ ಮುಂದುವರೆದರೆ ಮುಂದಿನ ಸಲದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಜನತಾ ಪಕ್ಷವು ಅನುವು ಮಾಡಿಕೊಡುತ್ತದೆ ಎಂಬುದನ್ನೂ ರಾಜ್ಯದ ಜನತಾ ಪಕ್ಷದವರು ಅರಿತಿರಬೇಕು. ತಮಗೆ ದೊರೆತ ಸುಸಂದರ್ಭವು ಪೂರ್ತಿಯಾಗಿ ಜಾರಿ ಹೋಗುವ ಮೊದಲು ಅದನ್ನು ಉಳಿಸಿಕೊಳ್ಳಲು ಜನತಾ ಪಕ್ಷವು ಶ್ರಮ ವಹಿಸಬೇಕು.

ಕಾಂಗ್ರೆಸ್ಸಿಯ ಭದ್ರಕೋಟೆ?

ಜಿಲ್ಲಾ ಪರಿಷತ್ ಚುನಾವಣೆಗಳಿಗೆ ಮೊದಲು ಜನತಾ ಪಕ್ಷದ ರಾಜ್ಯಮಟ್ಟದ ಧುರೀಣರೊಬ್ಬರಲ್ಲಿ ಮಾತನಾಡುವ ಸಂದರ್ಭ ಒದಗಿ ಬಂದಿತ್ತು. ದ. ಕ. ಜಿಲ್ಲೆ, ಕೊಡಗು, ಚಿಕ್ಕಮಗಳೂರು ಹಾಗೂ ಇನ್ನೊಂದೆರಡು ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೇ ಬಹುಮತ ಬರಬಹುದೆಂದೂ, ನಾವು ಈ ಜಿಲ್ಲೆಗಳ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳುವುದಿಲ್ಲವೆಂದೂ, ಉಳಿದ ಜಿಲ್ಲೆಗಳಲ್ಲಿ ಜನತಾಕ್ಕೇ ಬಹುಮತ ಬರಬಹುದೆಂದೂ, ಅಲ್ಲಿಗೇ ಹೆಚ್ಚಿಗೆ ಗಮನವೀಯಲಾಗುವುದೆಂದೂ ಅವರು ಹೇಳಿದರು. ಚುನಾವಣಾ ಫಲಿತಾಂಶವು ಇವರ ಲೆಕ್ಕಾಚಾರವು ಹೆಚ್ಚು ಕಡಮೆ ಸರಿ ಇದೆಯೆಂದು ತೋರಿಸುತ್ತದೆ. ಆದರೆ ಆಶ್ಚರ್ಯವೆಂದರೆ ಕಾಂಗ್ರೆಸ್ಸಿಗೆ ಬಹುಮತ ದೊರೆಯಬಹುದಾದ ಜಿಲ್ಲೆಗಳ ಪರಿಸ್ಥಿತಿಯನ್ನು ಅರ್ಥೈಸಿ, ರಾಜಕೀಯ ಲಾಭ ಪಡೆಯಲು (ಇಂದಲ್ಲದಿದ್ದರೆ ಮುಂದಾದರೂ) ತಂತ್ರ ರೂಪಿಸುವ ಬದಲು, ಈ ಜಿಲ್ಲೆಗಳನ್ನು ಕಾಂಗ್ರೆಸ್‌ಗೇ ಬಿಟ್ಟುಕೊಡಲು ನಿರ್ಧರಿಸಿದಂತೆ ವರ್ತಿಸಿರುವ ಜನತಾ ಪಕ್ಷದ ರಾಜ್ಯ ಮುಖಂಡತ್ವದ ಮುತ್ಸದ್ದಿತನ! ಈ ರೀತಿಯ ತೀರ್ಮಾನಕ್ಕೆಯಿಂದಾಗಿಯೇ ಮುಖ್ಯಮಂತ್ರಿಗಳು ಹಾಗೂ ಪ್ರಮುಖ ಜನತಾ ಧುರೀಣರುಗಳು ಚುನಾವಣೆಗೆಮೊದಲಾಗಲೀಅಥವಾಚುನಾವಣೆಯ ಪ್ರಚಾರದ ಸಂದರ್ಭದಲ್ಲಾಗಲೀ ಈ ಜಿಲ್ಲೆಗಳತ್ತ ವಿಶೇಷ ಗಮನ ಹರಿಸಿಲ್ಲ. ಅಂದರೆ ದ. ಕ. ಜಿಲ್ಲೆ ಮತ್ತು ಇನ್ನು ಕೆಲವೆಡೆಗಳಿಗೆ ಹೋಗುವುದೇ ನಿಷ್ಪ್ರಯೋಜಕ; ಈ ಜಿಲ್ಲೆಗಳು ಕಾಂಗ್ರೆಸ್ಸಿಗೇ ಸೇರಿದ್ದು ಎಂಬ ಜನತಾ ಪಕ್ಷದವರ ತಿಳುವಳಿಕೆ. ಇದು ರಾಜಕೀಯ ಅಪರಿಪಕ್ವತೆಯನ್ನು ಎದ್ದುಕಾಣಿಸುತ್ತದೆ.

ದ. ಕ. ಜಿಲ್ಲೆಯ ಬಗ್ಗೆ ಸ್ವಲ್ಪ ವಿಮರ್ಶಿಸುವುದು ಅಗತ್ಯವಿದೆ. ಈ ಜಿಲ್ಲೆಯು ಕಾಂಗ್ರೆಸ್ಸಿಯ ಭದ್ರಕೋಟೆಯೆಂಬ ತಿಳುವಳಿಕೆಯು ತಪ್ಪೆಂದು ಆಗ ಅರ್ಥವಾಗುವುದು. ದ. ಕ. ಜಿಲ್ಲೆಯು ರಾಜ್ಯದ ಉಳಿದ ಜಿಲ್ಲೆಗಳಿಗಿಂತ ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಭಿನ್ನವಾಗಿದೆ. ರಾಜ್ಯದ ಹಳೆ ಮೈಸೂರಿನ ಗಾಳಿ ಇಲ್ಲಿ ಬೀಸುವುದಿಲ್ಲ ಎನ್ನಬಹುದು. ರಾಜ್ಯದಾದ್ಯಂತ ನಡೆದ ರೈತ ಚಳವಳಿ, ಗೋಕಾಕ್ ವರದಿ ಜಾರಿಗಾಗಿ ನಡೆದ ಚಳವಳಿ, ಇತ್ತೀಚೆಗೆ ವೆಂಕಟಸ್ವಾಮಿ ಆಯೋಗದ ವರದಿಯ ವಿರೋಧ ಮತ್ತು ಪರ ನಡೆದ ಚಳವಳಿ ಇತ್ಯಾದಿಗಳ ಬಿಸಿ ದ.ಕ. ಜಿಲ್ಲೆಯಲ್ಲಿ ಇರದಿದ್ದುದನ್ನು ನೋಡಿದರೆ, ಇವಾವುಗಳ ಗಾಳಿಯೂ ಪಶ್ಚಿಮ ಘಟ್ಟಗಳ ಸಾಲನ್ನು ದಾಟಿ ಇತ್ತ ಬೀಸಲೇ ಇಲ್ಲ ಎನ್ನಬಹುದು. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಸ್ವಲ್ಪ ಮಟ್ಟಿಗೆ ಇದೇ ಪರಿಸ್ಥಿತಿ ಇದೆ. ಚುನಾವಣಾ ಫಲಿತಾಂಶಗಳೂ ಅಷ್ಟೆ. ದ. ಕ. ಜಿಲ್ಲೆಯ ಫಲಿತಾಂಶಗಳು ರಾಜ್ಯದ ಉಳಿದೆಡೆಗಳಿಗಿಂತ ತೀರಾ ಭಿನ್ನವಾಗಿವೆ. 1983 ಮತ್ತು 85ರ ವಿಧಾನ ಸಭಾ ಚುನಾವಣೆ ಮತ್ತು ಇತ್ತೀಚೆಗಿನ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳ ಫಲಿತಾಂಶಗಳು ಈ ಮೇಲೆ ಹೇಳಿರುವ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ.

1985ರ ವಿಧಾನ ಸಭಾ ಚುನಾವಣೆಯಲ್ಲಿ ದ. ಕ. ಜಿಲ್ಲೆಯಲ್ಲಿ ಜನತಾ ಪಕ್ಷಕ್ಕೆ ಒಂದೇ ಸ್ಥಾನ ದೊರೆತರೂ,ಉಳಿದ ಹೆಚ್ಚಿನ ಕ್ಷೇತ್ರಗಳಲ್ಲಿ ಇದಕ್ಕೆ ಎರಡನೇ ಸ್ಥಾನ ದೊರೆತಿತ್ತು. ಭಾ. ಜ. ಪ. ವು ದೊಡ್ಡ ಸೋಲನ್ನು ಅನುಭವಿಸಬೇಕಾಗಿ ಬಂತು. ಭಾ. ಜ. ಪ. ಕ್ಕೆ ಬೆಂಬಲವಿತ್ತಿದ್ದ ಒಂದು ದೊಡ್ಡ ಜನ ವಿಭಾಗ 85ರ ಚುನಾವಣೆಯಲ್ಲಿ ಜನತಾ ಪಕ್ಷವನ್ನು ಬೆಂಬಲಿಸಿದ್ದರು. ಇದನ್ನು ಅರ್ಥಮಾಡಿಕೊಂಡು ರಾಜ್ಯದಲ್ಲಿ ಸರಕಾರವಿರುವ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿ, ಜನತೆಯೊಂದಿಗೆ ಸಂಪರ್ಕವಿರಿಸಿ, ಜನಪರ ಕೆಲಸಗಳನ್ನು ಮಾಡುತ್ತಾ, ಗ್ರಾಮಮಟ್ಟದಿಂದಲೇ ಸಂಘಟನೆಯನ್ನು ಕಟ್ಟುವ ಕೆಲಸ ಮಾಡಬೇಕಿತ್ತು. ಆದರೆ ಇದಕ್ಕೆ ಬದಲು ಜನತಾ ಪಕ್ಷದ ಜಿಲ್ಲಾ ಹಾಗೂ ತಾಲೂಕು ಮುಖಂಡರೆನಿಸಿದವರು ಜನತೆಯಿಂದ ದೂರವಿದ್ದು, ಗುಂಪು ಕಲಹದಲ್ಲಿ ನಿರತರಾಗಿದ್ದು, ಬೆಂಗಳೂರಿಗೆ ಧಾವಿಸುವುದೇ ಜಾಸ್ತಿಯಾದುದರಿಂದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಈ ಜಿಲ್ಲೆಯಲ್ಲಿ ಒದೆತ ತಿನ್ನಬೇಕಾಯಿತು. ಇದರೊಂದಿಗೆ ಕಾಂಗ್ರೆಸ್ ವಿರೋಧ ಮತಗಳ ವಿಭಜನೆ ಕಾಂಗ್ರೆಸ್ಸಿಗೆ ಸಹಾಯವಾಯಿತು. ಮತಗಳ ಲೆಕ್ಕಾಚಾರ ನೋಡಿದಲ್ಲಿ 1985 ರ ವಿಧಾನ ಸಭಾ ಚುನಾವಣೆಯಲ್ಲಿ ಜನತಾಕ್ಕೆ ಬೆಂಬಲವಿತ್ತಿದ್ದ (1983ರಲ್ಲಿ ಬಾಜಪವನ್ನು ಬೆಂಬಲಿಸಿದ್ದ) ಒಂದು ಜನ ವಿಭಾಗ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಮತ್ತೆ ಭಾಜಪಕ್ಕೆ ಬೆಂಬಲವಿತ್ತಿರುವುದು ಸ್ಪಷ್ಟ. ಕಮ್ಯೂನಿಸ್ಟ್ ಪಕ್ಷಗಳು, ಅದರಲ್ಲೂ ಸಿಪಿಐ(ಎಂ)ನಿಂದ ದೂರವಾದದ್ದೂ ಈ ಜಿಲ್ಲೆಯಲ್ಲಿ ರೈತ, ಕಾರ್ಮಿಕರ ಬೆಂಬಲವು ಜನತಾ ಪಕ್ಷಕ್ಕೆ ದೊರಕದಂತೆ ಮಾಡಿತು. ರಾಜ್ಯದ ಉಳಿದೆಡೆಗಳಿಗಿಂತ ಭಿನ್ನವಾಗಿ ವರ್ತಿಸುವ ಈ ಜಿಲ್ಲೆಯ ಜನರ ಮೇಲೆ ಈ ಜಿಲ್ಲೆಯತ್ತ ಗಮನ ಕೊಡದ ಹಾಗೂ ಪ್ರಚಾರಕ್ಕಾಗಿ ಬಾರದ ಹೆಗಡೆಯವರ ಮಾಯಾದಂಡ ಪರಿಣಾಮ ಬೀರಲೇ ಇಲ್ಲ!

> "ರಾಜ್ಯದಲ್ಲಿ ಮತ್ತೆ ಅಧಿಕಾರ ಪಡೆಯುವತ್ತ ಕಾಂಗ್ರೆಸ್ ಮುಂದುವರೆಯಲು ಜನತಾ ಪಕ್ಷ ಮತ್ತು ಅದರ ಸರಕಾರ ಅನುವು ಮಾಡುತ್ತಿವೆ ಎಂಬುದು ಇತ್ತೀಚೆಗಿನ ಚುನಾವಣಾ ಫಲಿತಾಂಶಗಳಿಂದ ಸ್ಪಷ್ಟವಾಗುತ್ತಿದೆ".

> ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಿಲ್ಲಾ ಪರಿಷತ್ ಮತ್ತು ಮಂಡಲಪಂಚಾಯತ್ ಚುನಾವಣೆಗಳಲ್ಲಿ ಜನಸಮುದಾಯ ಎತ್ತಕಡೆ ಒಲಿದಿದೆ, ಒಲಿಯುತ್ತಿದೆ ಎಂಬುದರ ಬಗ್ಗೆ ಎಂ. ಕೆ. ಅವರು ನಡೆಸಿರುವ ರಾಜಕೀಯ ವಿಶ್ಲೇಷಣೆಯನ್ನು ಇಲ್ಲಿ ನೀಡುತ್ತಿದ್ದೇವೆ.

ಗೇಣಿದಾರ ರೈತರಿಗೆ ಪ್ರಯೋಜನ ದೊರೆತದ್ದು ಎಷ್ಟೇ ಕಡಿಮೆ ಇದ್ದರೂ ಭೂಸುಧಾರಣೆಯಂತಹ ಕ್ರಮ,ಜನಾರ್ದನ ಪೂಜಾರಿಯವರ ಸಾಲ ಮೇಳಗಳು ಅಲ್ಪ ಸಂಖ್ಯಾತರ ನಿರ್ಣಾಯಕ ಮತಗಳು ಇವೇ ಮೊದಲಾದ ಕಾರಣಗಳಿಂದ ದ.ಕ. ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ತನ್ನದೇ ಆದ ಗಟ್ಟಿ ನೆಲೆ ಇದ್ದರೂ, ತನ್ನ ವಿರೋಧ ಮತಗಳ ವಿಭಜನೆಯಿಂದಷ್ಟೆ ಕಾಂಗ್ರೆಸ್ಸಿಗೆ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಅತೀ ಹೆಚ್ಚಿಗೆ ಸ್ಥಾನ ದೊರೆಯುವಂತಾಯಿತು.

ಮತವಿತ್ತಿದ್ದರು. ಅಂದರೆ ಮತ ಚಲಾಯಿಸಿದವರ ಪೈಕಿ ಕೇವಲ ಶೇ.30ರಷ್ಟೆ ಮಂದಿ ಬೆಂಬಲಿಸಿದರೂ ಪಡೆದ ಸ್ಥಾನಗಳು ಶೇಕಡಾ 85ರಷ್ಟು! ಇನ್ನೂ ಮುಂದುವರಿದು ಹೇಳುವುದಿದ್ದರೆ ಮತಪಟ್ಟಿಯಲ್ಲಿ ನಮೂದಿಸಿರುವ ಒಟ್ಟು ಮತದಾರರ ಪೈಕಿ ಶೇಕಡಾ 18ರಿಂದ 20 ರಷ್ಟೆ ಜನ ಕಾಂಗ್ರೆಸ್ಸಿಗೆ ಬೆಂಬಲವಿತ್ತಿದ್ದರೂ ಪಡೆದ ಸ್ಥಾನಗಳು ಸುಮಾರು ಶೇಕಡಾ85! (59ರ ಪೈಕಿ 51 ಸ್ಥಾನಗಳನ್ನು ಈ ಜಿಲ್ಲೆಯಲ್ಲಿ ಕಾಂಗ್ರೆಸ್ ಗೆದ್ದಿದೆ). ಇದೊಂದು ವಿಪರ್ಯಾಸ! ಜನತಾಕ್ಕೆ ಬಹುಮತ ದೊರೆತಲ್ಲೂ ಹೀಗೆಯೇ ಇರಲೂ ಬಹುದು. ಕಡಿಮೆ ಜನ ಬೆಂಬಲದಿಂದ ಹೆಚ್ಚಿನ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲು ಸಾಧ್ಯವಾಗುವುದು ನಮ್ಮ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿಯ ಒಂದು ದೋಷ. ಅಂದರೆ ಹೆಚ್ಚಿನ ಜನರ, ಬಹು ಸಂಖ್ಯೆಯ ಜನರ ವಿರೋಧವಿದ್ದಾಗ್ಯೂ, ತನ್ನ ವಿರುದ್ಧದ ಮತಗಳು ವಿಭಜಿಸಲ್ಪಟ್ಟಾಗ ಒಂದು ರಾಜಕೀಯ ಪಕ್ಷವು ಬಹುಮತ ಸ್ಥಾನಗಳನ್ನು ಗಳಿಸಿ ಅಧಿಕಾರ ಚಲಾಯಿಸಬಹುದು!

ಅಂತೂ ಒಂದು ವಿಷಯವು ಸ್ಪಷ್ಟ. ಜನತಾ ಪಕ್ಷವು ಕಾಂಗ್ರೆಸ್ ವಿರುದ್ಧದ ಮತಗಳು ಹಂಚಿ ಹೋಗದಂತೆ ಸ್ವಲ್ಪವಾದರೂ ಹುಷಾರಿದ್ದುಕೊಂಡು ರಾಜಕೀಯ ಮಾಡಿದ್ದರೆ ಈ ಕಾಂಗ್ರೆಸ್ ಭದ್ರಕೋಟೆಗೆ ಲಗ್ಗೆ ಹಾಕಬಹುದಿತ್ತು. ಈ ಜಿಲ್ಲೆಯು ಕಾಂಗ್ರೆಸ್ಸಿಯ ಪಾಲಿಗೆ ಕಟ್ಟಿಟ್ಟ ಬುತ್ತಿ ಎಂಬ ತಪ್ಪು ತಿಳುವಳಿಕೆಯನ್ನು ದೂರಮಾಡಿ, ಈ ಜಿಲ್ಲೆಯತ್ತ ಮೊದಲಿಂದಲೇ ಗಮನ ಹರಿಸಿ, ಕಾಂಗ್ರೆಸ್ ವಿರೋಧ ಮತಗಳು ವಿಭಜನೆಯಾಗದಂತೆ (ಹಿಂದಿನಂತೆ ಕಮ್ಯೂನಿಸ್ಟರೊಂದಿಗಾದರೂ ಹೊಂದಾಣಿಕೆಯನ್ನು ಮುಂದುವರಿಸಿ) ನೋಡಿಕೊಂಡಿದ್ದರೆ ಹಾಗೂ ಜನತಾಪಕ್ಷವು ಒಂದಿಷ್ಟಾದರೂ ಸಾಮೂಹಿಕ ಮುಖಂಡತ್ವ (Collective Leadership), ಸಂಘಟನೆಗಳತ್ತ ಗಮನ ಹರಿಸಿದ್ದರೆ ಫಲಿತಾಂಶವು ಬೇರೆಯೇ ಆಗುತ್ತಿತ್ತು.

ಜನತೆಯ ಹೋರಾಟಗಳು ಬೇಕು

ಚುನಾವಣಾ ಫಲಿತಾಂಶಗಳನ್ನು ಅರ್ಥಮಾಡಿ ಅದು ಕಾಂಗ್ರೆಸ್ ಇರಲಿ ಅಥವಾ ಜನತಾ ಪಕ್ಷವೇ ಇರಲಿ, ಜನರ ಬದುಕನ್ನು ಕಾಡುವ ತುರ್ತು ಸಮಸ್ಯೆಗಳ ಪರಿಹಾರಕ್ಕಾಗಿ ಜನತೆಯ ಹೋರಾಟಗಳನ್ನು ಸಂಘಟಿಸಬೇಕು. ಇದರಲ್ಲಿ ಎಡಪಕ್ಷಗಳಿಗೆ ಪ್ರಮುಖ ಪಾತ್ರವಿದೆ. ರಾಜ್ಯದಲ್ಲಿ ಸ್ವಲ್ಪ ಮಟ್ಟಿಗೆ ನಿಷ್ಕ್ರಿಯವಾಗಿ ಕಾಣುವ ಎಡ ಪಕ್ಷ ಮತ್ತು ಸಂಘಟನೆಗಳು ಈ ದಿಸೆಯಲ್ಲಿ ತುರ್ತಾಗಿ ಕಾರ್ಯೋನ್ಮುಖವಾಗಬೇಕಾಗಿರುವ ಚಾರಿತ್ರಿಕ ಅವಶ್ಯವಿದೆ. ಕಾಂಗ್ರೆಸ್, ಜನತಾ ಪಕ್ಷಗಳೆರಡೂ ಮೂಲಭೂತವಾಗಿ ಒಂದೇ ಎಂಬುದನ್ನು ಜನತಾ ಪಕ್ಷದ ನಾಲ್ಕು ವರ್ಷದ ಆಡಳಿತವು ತೋರಿಸಿಕೊಟ್ಟಿದೆ. ಬಹುಮತ ಸ್ಥಾನಗಳನ್ನು ಪಡೆದು ಅಧಿಕಾರ ನಡೆಸುವ ಪಕ್ಷಕ್ಕೆ ಅಥವಾ ಪಕ್ಷಗಳಿಗೆ ಎಷ್ಟೇ ಬಹುಮತವಿದೆಯೆಂದು ಹೇಳಿದರೂ, ಬಹುಮತದ ಜನ ವಿರೋಧವಿರುವುದರಿಂದ ಇವರೆಲ್ಲರನ್ನು ಧೋರಣೆ ಮತ್ತು ಕಾರ್ಯಕ್ರಮಗಳ ಆಧಾರದಲ್ಲಿ ಒಗ್ಗೂಡಿಸಿ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಹೋರಾಡಬೇಕು. ಚುನಾವಣಾ ಫಲಿತಾಂಶಗಳ ಮೇಲ್ನೋಟದಿಂದ ದಿಗಿಲುಗೊಳ್ಳದೆ ಕಾರ್ಯೋನ್ಮುಖರಾಗಬೇಕು.

'ಗ್ರೀನ್‌ಬೆಲ್ಟ್' ಗೊಂದಲ

ಪ್ರಿಯರೆ,

ಕರ್ನಾಟಕದಲ್ಲಿ ಕೃಷಿಯೇತರ ಉದ್ದೇಶಗಳಿಗಾಗಿ ಕೃಷಿಭೂಮಿಯ ಬಳಕೆ ಆಗಬೇಕಾದರೆ, ಭೂ ಪರಿವರ್ತನೆಗಾಗಿ ('ಲ್ಯಾಂಡ್ ಕನ್ವರ್ಶನ್'ಗಾಗಿ) ಕಂದಾಯ ಇಲಾಖೆಯ ಅನುಮತಿಯನ್ನು ಪಡೆಯತಕ್ಕದ್ದು, ಮತ್ತು ಪರಿವರ್ತನಾ ದಂಡವನ್ನು ('ಕನ್ವರ್ಶನ್ ಫೈನ್'ನ್ನು) ಸಲ್ಲಿಸತಕ್ಕದ್ದು ಎಂದು ವಿಧಿಸಲಾದುದು 1964ರ 'ಭೂ ಕಂದಾಯ ಶಾಸನ'ದ 95ನೆ 'ಸೆಕ್ಷನ್'ನಲ್ಲಿ.

'ಪಚ್ಚೆ ವಲಯ'ಗಳೆಂದು ('ಗ್ರೀನ್ ಬೆಲ್ಟ್') ಘೋಷಿಸಲ್ಪಟ್ಟ ಪ್ರದೇಶಗಳಲ್ಲಿಯೂ ಭೂ ಪರಿವರ್ತನೆಗೆ ಅನುಮತಿಯನ್ನು ನೀಡಲಾಗದೆಂದು ಮತ್ತೆ ವಿಧಿಸಲಾದುದು 1984ರಲ್ಲಿ, ಆ ವರ್ಷದ 'ಭೂ ಕಂದಾಯ (ತಿದ್ದುಪಡಿ) ಶಾಸನ'ವು 1964ರ ಮೂಲ ಶಾಸನದ 95ನೆ 'ಸೆಕ್ಷನ್'ಗೆ ತಂದುಕೊಟ್ಟ ಹೊಸ 'ಸಬ್ ಸೆಕ್ಷನ್' ಒಂದರಲ್ಲಿ.

ಅಂದ ಮಾತ್ರಕ್ಕೆ, ಕರ್ನಾಟಕದಲ್ಲಿ 'ಪಚ್ಚೆ ವಲಯ'ಗಳಿವೆ ಎಂದನ್ನುವಂತಿಲ್ಲ. 'ಪಚ್ಚೆ ವಲಯ'ಗಳು ಅಸ್ತಿತ್ವಕ್ಕೆ ಬರುವುದು ಸರಕಾರವು ಎರಡು ಪೂರ್ವಭಾವಿ ಕ್ರಮಗಳನ್ನು ಕೈಗೊಂಡ ಮೇಲೆ. 'ಪಚ್ಚೆ ವಲಯ' ಎಂಬ ಹಣೆಪಟ್ಟಿಯನ್ನು ಯಾವ ಬಗೆಯ ಪ್ರದೇಶಗಳಿಗೆ, ಮತ್ತು ಯಾವ ನೆಲೆಯಲ್ಲಿ, ಅನ್ವಯಿಸತಕ್ಕದ್ದು ಎಂಬುದನ್ನು ನಿರ್ಣಯಿಸಲು ಅವಶ್ಯವಾದ ನಿಯಮಗಳನ್ನು ('ರೂಲ್ಸ್'– ಅವುಗಳನ್ನು) ರೂಪಿಸುವುದು ಮೊದಲ ಪೂರ್ವಭಾವಿ ಕ್ರಮ. ಇದನ್ನು ಸರಕಾರವು ತನ್ನ 'ಆರ್‌ಡಿ 48 ಎಲ್‌ಜಿಪಿ 64' ಕ್ರಮಸಂಖ್ಯೆಯ 24-10-1985 ದಿನಾಂಕದ, ಪ್ರಕಟಣೆಯ ಮೂಲಕ ಕೈಗೊಂಡಾಗಿದೆ. ಈ ನಿಯಮಗಳನ್ನು ಅನ್ವಯಿಸಿ, 'ಇವುಗಳೇ ಕರ್ನಾಟಕದಲ್ಲಿಯ ಪಚ್ಚೆ ವಲಯಗಳು' ಎಂದು ನಿಖರವಾಗಿ ಘೋಷಿಸುವುದು ಎರಡನೆ ಪೂರ್ವಭಾವಿ ಕ್ರಮ. ಇದನ್ನು ಸರಕಾರವು ಇನ್ನೂ ಕೈಗೊಂಡಿಲ್ಲ.

ಹಾಗಾಗಿ ಸದ್ಯಕ್ಕೆ, ಕಾನೂನಿನ ದೃಷ್ಟಿಯಲ್ಲಿ, ಕರ್ನಾಟಕದಲ್ಲಿಲ್ಲಿಯೂ 'ಗ್ರೀನ್ ಬೆಲ್ಟ್' ಇಲ್ಲವೇ ಇಲ್ಲವೆನ್ನುವುದನ್ನು ಸರಕಾರವೇ ತನ್ನ 'ಆರ್‌ಡಿ 48 ಎಲ್‌ಪಿ 84' ಕ್ರಮಸಂಖ್ಯೆಯ 29-7-1986 ದಿನಾಂಕದ, ಸುತ್ತೋಲೆಯಲ್ಲಿ ಸ್ಪಷ್ಟೀಕರಿಸಿದೆ.

ಆದ್ದರಿಂದ ಯಾರಾದರೂ (ಅವರು ಕಂದಾಯ ಇಲಾಖೆಯವರಾಗಲಿ, 'ಪ್ಲ್ಯಾನಿಂಗ್ ಅಥಾರಿಟಿ'ಗಳವರಾಗಲಿ) 'ಗ್ರೀನ್ ಬೆಲ್ಟ್' ಎಂಬ ಮಾತನ್ನು ಉಚ್ಚರಿಸಿ ಜನರನ್ನು ಬೆದರಿಸಲು ಯತ್ನಿಸಿದರೆ, ಸದ್ಯಕ್ಕಂತೂ ಯಾರೂ ಬೆದರಬೇಕಾಗಿಲ್ಲ.

ಡಾ| ಕೆ. ನಾರಾಯಣ ರಾವ್
ಬಳಕೆದಾರರ ವೇದಿಕೆ
ಉಡುಪಿ

ಚಿಂತನೆ

"ಕ್ರಾಂತಿ ನಾವಾಗಿಯೇ ಮಾಡುವುದಲ್ಲ, ಅದಾಗಿಯೇ ಬರುತ್ತದೆ."

—ವೆಂಡೆಲ್ ಫಿಲಿಪ್ಸ್

ಯಾವುದೇ ಪಕ್ಷಕ್ಕೂ ನಿಶ್ಶರ್ತ ಬೆಂಬಲವಿಲ್ಲ

ಬಿಜೆಪಿ ಸ್ಪಷ್ಟೀಕರಣ

ಮಂಗಳೂರು, ಜ. 24-"ಯಾವುದೇ ಅಧಿಕೃತ ರಾಜಕೀಯ ಪಕ್ಷಗಳಿಗೆ ಯಥಾ ಷರ್ತ್ಯಾಗಿ ಬಿಜೆಪಿ ಬೆಂಬಲ ನೀಡುವುದಿಲ್ಲ" ಎಂದು ಬಿಜೆಪಿ ಜಿಲ್ಲಾಧ್ಯಕ್ಷರಾದ ವಿ. ಧನಂಜಯ ಕುಮಾರ್ ಅವರು ಹೇಳಿದ್ದಾರೆ.

ಅವರು ಒಂದು ಹೇಳಿಕೆ ನೀಡಿ ಕಾಂಗ್ರೆಸ್ (ಐ) ಜನತಾ ಹಾಗೂ ಕಮ್ಯುನಿಸ್ಟ್ ಪಕ್ಷಗಳ ವಿಷಯದಲ್ಲಿ ಬಿಜೆಪಿ ಸಮಾನ ದೋರಣೆ ಹೊಂದಿದ್ದು ಮುಸ್ಲಿಂ ಲೀಗ್ ಜತೆಯಲ್ಲಿ ಯಾವುದೇ ಸಖ್ಯದ ಪ್ರಶ್ನೆ ಇಲ್ಲ ಎಂದಿದ್ದಾರೆ.

ಜಿಲ್ಲೆಯ ವಿವಿಧ ಮಂಡಲ ಪಂಚಾಯತ್ ಪ್ರದೇಶಗಳಲ್ಲಿ ಬಿಜೆಪಿ ಅಭ್ಯರ್ಥಿಗಳು 275ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಜನ ವಿಶ್ವಾಸಗಳಿಸಿ ಆಯ್ಕೆಯಾಗಿದ್ದಾರೆ ಅಲ್ಲದೆ, 200ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಚುನಾಯಿತ ರಾಗಿದ್ದಾರೆ ಎಂದು ವಿ. ಧನಂಜಯ ಕುಮಾರ್ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ವಿಟ್ಲ ಮತ್ತು ಪೆರುವಾಯಿ ಮಂಡಲ ಪಂಚಾಯತಿಗಳಲ್ಲಿ ಹಾಗೂ ಸುಳ್ಯ ತಾಲೂಕಿನ ಅಜ್ಜಾವರ ಮತ್ತು ಜಾಲ್ಸೂರು ಮಂಡಲ ಪಂಚಾಯತ್‌ಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಮಂಗಳೂರು ಹಾಗೂ ಉಡುಪಿ ತಾಲೂಕುಗಳ ಅನೇಕ ಮಂಡಲ ಪಂಚಾಯತ್‌ಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಆಯ್ಕೆಯಲ್ಲಿ ಬಿಜೆಪಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದೂ ಧನಂಜಯ ಕುಮಾರ್ ಹೇಳಿದ್ದಾರೆ.

ಜಿಲ್ಲೆಯ ವಿವಿಧೆಡೆ ಉಚಿತ ಉದರದರ್ಶಕ ಚಿಕಿತ್ಸಾ ಶಿಬಿರ

ಮಂಗಳೂರು, ಜ. 24– ದ. ಕ. ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಸಕ್ತ ಜನವರಿ ತಿಂಗಳಲ್ಲಿ ಜಿಲ್ಲೆಯ ಈ ಕೆಳಗಿನ ಸ್ಥಳಗಳಲ್ಲಿ ಉಚಿತ ಉದರ ದರ್ಶಕ ಶಿಬಿರಗಳನ್ನು ಏರ್ಪಡಿಸಿದ್ದು, ಅದರ ವಿವರ ಹೀಗಿದೆ.

27ರಂದು ಬೆಳಿಗ್ಗೆ 10ಗಂಟೆಗೆ ಬಂಟ್ವಾಳ ಸರಕಾರಿ ಆಸ್ಪತ್ರೆ ಮತ್ತು ಮಧ್ಯಾಹ್ನ ಎರಡು ಗಂಟೆಗೆ ವಿಟ್ಲ ಪ್ರಾಥಮಿಕ ಆರೋಗ್ಯ ಕೇಂದ್ರ, 28ರಂದು ಬೆಳಿಗ್ಗೆ 10 ಗಂಟೆಗೆ ಬೆಳ್ತಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರ, 12 ಗಂಟೆಗೆ ಸುಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ, 29ರಂದು ಬೆಳಿಗ್ಗೆ 10 ಗಂಟೆಗೆ ಕುಂದಾಪುರ ತಾಲೂಕಿನ ಸಿದ್ದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 30ರಂದು ಉಡುಪಿ ಸರಕಾರಿ ಆಸ್ಪತ್ರೆ (ಮಹಿಳೆಯರಿಗೆ)ಯಲ್ಲಿ ಉದರ ದರ್ಶಕ ಶಿಬಿರಗಳನ್ನು ಏರ್ಪಡಿಸಲಾಗಿದೆ.

ಧಾರವಾಡ ಜಿಲ್ಲೆಯ ಎರಡು ಕಡೆ ನಿಷೇಧಾಜ್ಞೆ

ಧಾರವಾಡ, ಜ. 24– ಧಾರವಾಡ ತಾಲೂಕಿನ ಉಪ್ಪಿನ ಬೆಟಗೇರಿ ಮತ್ತು ನರಗುಂದ ತಾಲೂಕಿನ ಎರಡು ಗ್ರಾಮಗಳಲ್ಲಿ ನಡೆದ ಸಣ್ಣ ಪುಟ್ಟ ಘರ್ಷಣೆಗಳಿಂದಾಗಿ ಅಲ್ಲಿನ ಉದ್ರಿಕ್ತ ವಾತಾವರಣ ತಡೆಗಟ್ಟಲು ನರಗುಂದದಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಉಪ್ಪಿನ ಬೆಟಗೇರಿ ಮಂಡಲ ಪಂಚಾಯತಿ ಚುನಾವಣೆಯಲ್ಲಿ ಸೋತ ಕಾಂಗ್ರೆಸ್ ಅಭ್ಯರ್ಥಿಯ ಬೆಂಬಲಿಗರು, ಜನತಾ ಬೆಂಬಲಿಗ ಹುಡುಗನೊಬ್ಬನನ್ನು ಹೊಡೆದಾಗ ಗಲಾಟೆ ಆರಂಭವಾಯಿತೆನ್ನಲಾಗಿದೆ. ಈಗ ಪರಿಸ್ಥಿತಿ ಹತೋಟಿಯಲ್ಲಿದೆ ಎಂದು ಧಾರವಾಡದ ಸೂಪರಿಂಟೆಂಡೆಂಟ್ ಎನ್. ಅಚ್ಯುತರಾವ್ ತಿಳಿಸಿದ್ದಾರೆ.

ನರಗುಂದತಾಲೂಕಿನ ಎರಡು ವಿರೋಧಿ ಗುಂಪುಗಳಲ್ಲಿ ಘರ್ಷಣೆಯಾಗಿ ಎರಡು ಗುಂಪಿನಲ್ಲಿ ಹಲವರಿಗೆ ಚಿಕ್ಕಪುಟ್ಟ ಗಾಯಗಳಾಗಿವೆ. ನರಗುಂದ ತಾಲೂಕಿನ ಚಿಕ್ಕ ನರಗುಂದ ಗ್ರಾಮದಲ್ಲಿ ಪಕ್ಷದ ಕಾರ್ಯಕರ್ತನೊಬ್ಬನನ್ನು ಹೊಡೆದ ಘಟನೆ ವರದಿಯಾಗಿದೆ.

ಮಾನವನಾಗಿ ಬದುಕಬೇಕಾದರೆ ಕಲೆ, ಸಂಸ್ಕೃತಿ, ಸಾಹಿತ್ಯ ಅವಶ್ಯ

ಕದ್ರಿ ನೃತ್ಯ ಶಾಲಾ ಸ್ವರ್ಣ ಮಹೋತ್ಸವದಲ್ಲಿ ಬೊಮ್ಮಾಯಿ

ಮಂಗಳೂರು, ಜ. 24– ಸಮಾಜದಲ್ಲಿ ಮಾನವ ಮಾನವನಾಗಬೇಕಾದರೆ, ವಿಶ್ವಕುಟುಂಬಿಯಾಗಿ ಬಾಳಬೇಕಾದರೆ ಕಲೆ, ಸಂಸ್ಕೃತಿ, ಸಾಹಿತ್ಯದ ಪಾತ್ರ ಮಹತ್ವದ್ದು, ಎಂದು ಕರ್ನಾಟಕ ಸರಕಾರದ ಕಂದಾಯ ಸಚಿವರಾದ ಎಸ್. ಆರ್. ಬೊಮ್ಮಾಯಿ ಅವರು ಹೇಳಿದರು.

ಅವರು ಶುಕ್ರವಾರ ಸಂಜೆ ಇಲ್ಲಿನ ಪುರಭವನದಲ್ಲಿ ಕದ್ರಿ ನೃತ್ಯ ವಿದ್ಯಾನಿಲಯದ ಸುವರ್ಣ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕಲೆಯನ್ನು ಬೆಳೆಸಲು ಸರಕಾರ ಸಮಾನ ಪ್ರೋತ್ಸಾಹ ಕೊಡಬೇಕು ಮತ್ತು ಪ್ರಗತಿಪರ ಚಿಂತನೆ ಮಾಡಬೇಕು ಎಂದು ಹೇಳಿದ ಬೊಮ್ಮಾಯಿ ಅವರು ಕಲೆ ಸಂಸ್ಕೃತಿಯ ಬಗ್ಗೆ ಎಷ್ಟು ಆಸ್ಥೆ ವಹಿಸಬೇಕಿತ್ತೋ ಅಷ್ಟನ್ನು ವಹಿಸಿಲ್ಲ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಾರ್ತಾ ಮತ್ತು ಯುವಜನ ಖಾತೆ ಮಾಜಿ ಸಚಿವರಾದ ಡಾ। ಜೀವರಾಜ್ ಆಳ್ವ ಅವರು ಮಾತನಾಡಿ, ಸಂಸ್ಕೃತಿಯಿಂದ ಮಾತ್ರ ದೇಶದಲ್ಲಿ ಏಕತೆ, ಸಮಗ್ರತೆ, ನಿರ್ಮಿಸಲು ಸಾಧ್ಯ ಎಂದರು.

ಕಲೆ, ಸಂಸ್ಕೃತಿ ಸಾಹಿತ್ಯವನ್ನು ಕೀಳಾಗಿ ಕಾಣುವ ವರ್ಗ ನಮ್ಮಲ್ಲಿದೆ ಎಂದು ವಿಷಾದಿಸಿದ ಡಾ। ಜೀವರಾಜ್ ಆಳ್ವ ಅವರು ತಾವು ಸಚಿವರಾಗಿದ್ದಾಗ ಕಲೆ, ಸಂಸ್ಕೃತಿಗೆ ಉತ್ತೇಜನ ಕೊಟ್ಟಾಗ ಕೆಲವರು ಟೀಕಿಸುತ್ತಿದ್ದರೆಂದರು.

ಸುವರ್ಣ ಮಹೋತ್ಸವದ ಅಂಗವಾಗಿ ಹೊರತರಲಾದ ಸ್ಮರಣ ಸಂಚಿಕೆಯನ್ನು ಡಾ। ಜೀವರಾಜ್ ಆಳ್ವ ಬಿಡುಗಡೆ ಮಾಡಿ, ನೃತ್ಯ ವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಕಲಾವಿದರನ್ನು ಗೌರವಿಸಿದರು.

ಇದೇ ಸಂದರ್ಭದಲ್ಲಿ ಎಂ. ಆರ್. ರಾಜರತ್ನಂ ಅವರನ್ನು ಸನ್ಮಾನಿಸಲಾಯಿತು.

ಪ್ರಾರಂಭದಲ್ಲಿ ನೃತ್ಯ ವಿದ್ಯಾನಿಲಯದ ಪ್ರಿನ್ಸಿಪಾಲರಾದ ಯು. ಎಸ್. ಕೃಷ್ಣರಾವ್ ಸ್ವಾಗತಿಸಿದರು. ಯು.ಕೆ. ಅರುಣ್ ವರದಿ ವಾಚಿಸಿದರು.

(ನೃತ್ಯ ವಿದ್ಯಾಲಯವನ್ನು ಉದ್ಘಾಟಿಸಿದ ಸಚಿವ ಎಸ್. ಆರ್. ಬೊಮ್ಮಾಯಿ ಹಾಗೂ ಮಾಜಿ ಸಚಿವ ಜೀವರಾಜ ಆಳ್ವ, ಯು. ಎಸ್. ಕೃಷ್ಣರಾವ್ ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು)

26ರಂದು ಬಿಜೆಪಿ ಜಿಲ್ಲಾ ಸಮಿತಿ ಸಭೆ

ಮಂಗಳೂರು, ಜ.24– ಭಾರತೀಯ ಜನತಾ ಪಕ್ಷದ ದ.ಕ. ಜಿಲ್ಲಾ ಸಮಿತಿ ಸಭೆ ಜ.26ರಂದು ಮಂಗಳೂರಿನ ಜಿಲ್ಲಾ ಕಚೇರಿಯಲ್ಲಿ ಜರಗಲಿದೆ.

ಈ ಸಭೆಯಲ್ಲಿ ಇತ್ತೀಚೆಗೆ ಜರಗಿದ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಚುನಾವಣೆಯ ಕುರಿತು ವಿಮರ್ಶೆ ಮಾಡಲಾಗುವುದು ಎಂದುಪ್ರಧಾನಕಾರ್ಯದರ್ಶಿ ಕೆ. ನಾರಾಯಣ ಶೆಟ್ಟಿಅವರು ತಿಳಿಸಿದ್ದಾರೆ.

ಎಣ್ಣೆ ಕಳ್ಳರ ಬಂಧನ

ಪುತ್ತೂರು, ಜ. 24–ಮಂಗಳೂರಿನಿಂದ ಬೆಂಗಳೂರಿಗೆ ಟ್ಯಾಂಕರ್‌ನಲ್ಲಿ ಸಾಗಿಸಲ್ಪಡುತ್ತಿದ್ದ ಪಾಮೊಲಿನ್ ಎಣ್ಣೆಯನ್ನು ಕದಿಯುತ್ತಿದ್ದ ಮೂವರನ್ನು ಇತ್ತೀಚೆಗೆ ಉಪ್ಪಿನಂಗಡಿ ಬಳಿ ಬಂಧಿಸಲಾಗಿದೆ.

ಕರ್ನಾಟಕ ಆಹಾರ ನಿಗಮಕ್ಕೆ ಸೇರಿದ ಟ್ಯಾಂಕರಿನ ಈ ಕಳ್ಳತನವನ್ನು ಪುತ್ತೂರು ವೃತ್ತ ನಿರೀಕ್ಷಕ ಮುಕ್ಕಾಟಿರ ಎ. ಅಪ್ಪಯ್ಯ ಅವರು ಪತ್ತೆ ಹಚ್ಚಿದ್ದು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಇಂದು ಶಶಿಧರ್ ಬ್ರಹ್ಮಾವರ ಅವರ ಚಿತ್ರಕಲಾ ಪ್ರದರ್ಶನ

ಬ್ರಹ್ಮಾವರ, ಜ. 24– ದಾವಣಗೆರೆ ಚಿತ್ರಕಲಾ ವಿದ್ಯಾಲಯದಲ್ಲಿ ಪದವಿ ಪಡೆದು 1986–87ನೇ ಸಾಲಿನಲ್ಲಿ ಮೂರನೇ ರ್‍ಯಾಂಕ್ ಪಡೆದ ಶಶಿಧರ ಬ್ರಹ್ಮಾವರ ಅವರ ಚಿತ್ರಕಲಾ ಪ್ರದರ್ಶನವು ಬ್ರಹ್ಮಾವರ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 25ರಂದು ಬೆಳಿಗ್ಗೆ ಆರಂಭಗೊಳ್ಳಲಿದೆ.

ಈ ಪ್ರದರ್ಶನವನ್ನು ಉಡುಪಿ ಚಿತ್ರಕುಟೀರದ ಬಿ. ಪಿ. ಬಯ್ಕರಿ ಉದ್ಘಾಟಿಸುವರು. 'ಮುಂಗಾರು' ದಿನಪತ್ರಿಕೆಯ ಸಂಪಾದಕ ವಡ್ಡರ್ಸೆ ರಘುರಾಮ ಶೆಟ್ಟಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿರುವರು.

ದಾವಣಗೆರೆ ಚಿತ್ರಕಲಾ ಶಾಲೆಯ ವಾಣಿಜ್ಯ ಕಲಾವಿಭಾಗದ ಮುಖ್ಯಸ್ಥ ಮಲ್ಲಿಕಾರ್ಜುನ ಜಾದವ್ 'ಜನ ಸಾಮಾನ್ಯರು ಮತ್ತು ಜಾಹೀರಾತು ಕಲೆ' ಎಂಬ ವಿಷಯದ ಕುರಿತು ಉಪನ್ಯಾಸ ನೀಡುವರು.

ಈ ಪ್ರದರ್ಶನವು 25ರ ಬೆಳಿಗ್ಗೆ 10 ಗಂಟೆಗೆ ಆರಂಭಗೊಂಡು ದಿ: 26ಕ್ಕೆ ಮುಕ್ತಾಯಗೊಳ್ಳುವುದು.

ಭಂಡಾರಿ ಸಮಾಜದ ಸಮ್ಮೇಳನ

ಕುಮಟಾ, ಜ. 24- ತಾಲೂಕು ಮಟ್ಟದ ಭಂಡಾರಿ (ದೇಶ ಭಂಡಾರಿ) ಸಮಾಜದ ವಾರ್ಷಿಕ ಮಹಾ ಸಮ್ಮೇಳನವು ಕಾರವಾರದ ನ್ಯಾಯಾಲಯದ ಎಂ. ವಿ. ಕುಮಠೇಕರ ಅವರ ಅಧ್ಯಕ್ಷತೆಯಲ್ಲಿ ಗುಡ್-ಹಾಗಲದ ಲೋಕನಾಥ ಮಾಧ್ಯಮಿಕ ಶಾಲೆಯಲ್ಲಿ ಇತ್ತೀಚೆಗೆ ನಡೆಯಿತು.

ಕಾರವಾರದ ಶಿವಾಜಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯ ಜಯವಂತಜಿ. ಪುರಳೇಕರ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಶಿವಾಜಿ ಕನ್ಯಾ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಎಲ್. ಡಿ. ಭಂಡಾರಿ ಸಮಾಜದ ಏಳಿಗೆ ಬಗ್ಗೆ ಮಾತನಾಡಿದರು.

ಸಮಾಜದ ಬಡ ವಿದ್ಯಾರ್ಥಿಗಳು ಶಿಕ್ಷಣ ನಿಧಿಗಾಗಿ ಗೋವಾ ಶಿಪ್ ಯಾರ್ಡ್‌ನ ಸಿವಿಲ್ ಇಂಜಿನಿಯರ್ ಶ್ರೀಧರ ಎಂ.ಎಸ್. ಮಿರ್ಜಾನಕರ ಹಾಗೂ ಇತರ ಗಣ್ಯರು ನೆರವನ್ನು ನೀಡಿದರು.

ದೇಶಭಂಡಾರಿ ಸಮಾಜವನ್ನು ಗುರುತಿಸಿ ಹಿಂದುಳಿದ ಪಂಗಡಕ್ಕೆ ಸೇರಿಸಿದ ರಾಜ್ಯ ಸರಕಾರವನ್ನು ಅಭಿನಂದಿಸುವ ನಿರ್ಣಯ ಸ್ವೀಕರಿಸಲಾಯಿತು.

ಸಂಘದ ಅಧ್ಯಕ್ಷ ಡಾ। ಜೆ. ಎಂ. ಮಂಗಳೇಕರ ಸ್ವಾಗತಿಸಿದರು. ಕಾರ್ಯದರ್ಶಿ ದೇಶಭಂಡಾರಿ ವರದಿ ಓದಿದರು. ಎಸ್.ವಿ. ಬೀರಕೋಡಿ ಪರಿಚಯ ಮಾಡಿದರು. ಆರ್. ಎಂ. ದೇಶಭಂಡಾರಿ ವಂದಿಸಿದರು.

ಕಾಪು ರೋಟರ್‍ಯಾಕ್ಟ್ ಕ್ಲಬ್‌ನ ಸನದು ಸಮಾರಂಭ

ಕಾಪು, ಜ. 24 ಕಾಪುವಿನ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಸ್ಥಾಪಿತವಾದ ಕಾಪು ರೋಟರ್‍ಯಾಕ್ಟ್ ಕ್ಲಬ್ಬಿಗೆ ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯ ಸನದನ್ನು ಪ್ರದಾನ ಮಾಡುವ ಸಮಾರಂಭ ಇತ್ತೀಚೆಗೆ ರೋಟರಿ ಕ್ಲಬ್ ಅಧ್ಯಕ್ಷ ಲ್ಯಾನ್ಸಿ ಪಿಂಟೋ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ರೋಟರಿ ಜಿಲ್ಲೆ 318.ರ ರೋಟರ್‍ಯಾಕ್ಟ್ ಸಭಾಪತಿ ಪಿ. ನಾರಾಯಣ ಅವರು ಮುಖ್ಯ ಅತಿಥಿಗಳಾಗಿದ್ದು ಸನದನ್ನು ಹಸ್ತಾಂತರಿಸಿದರು

ಕಾಪು ರೋಟರ್‍ಯಾಕ್ಟ್ ಸಭಾಪತಿ ಎಚ್. ಆರ್. ಆಳ್ವ ಅವರು ಕಾಪು ಕ್ಲಬ್ಬಿನ ಬಗ್ಗೆ ತಮ್ಮ ಅನಿಸಿಕೆಗಳನ್ನು ವಿವರಿಸಿದರು.

ಕಾರ್ಯದರ್ಶಿ ವಿದ್ಯಾಧರ ಪುರಾಣಿಕರು ವರದಿ ಓದಿದರು. ಪಿ. ವಿಠ್ಠಲ ಶೆಣೈ ಶುಭಾಶಂಸನೆಗೈದರು. ಈ ಸಂದರ್ಭದಲ್ಲಿ ರೋಟರ್‍ಯಾಕ್ಟ್ ಕ್ಲಬ್ಬಿನ ಸ್ಮರಣ ಸಂಚಿಕೆ "ಕರಾವಳಿ"ಯನ್ನು ಬಿಡುಗಡೆ ಗೊಳಿಸಲಾಯಿತು.

ರೋಟರ್‍ಯಾಕ್ಟ್ ಕ್ಲಬ್ಬಿನ ಅಧ್ಯಕ್ಷ ನಾರಾಯಣ ಶೆಟ್ಟಿ ಅವರು ಸಭೆಯಲ್ಲಿ ಮಾತನಾಡಿದರು. ಅನಂತರಾಮ ಭಟ್ ಅವರು ಧನ್ಯವಾದವಿತ್ತರು ಶ್ರೀನಿವಾಸ ರಾವ್ ಅವರು ಕಾರ್ಯಕ್ರಮ ನಿರ್ವಹಿಸಿದರು. ತಾರಾನಾಥ ಜೋಶಿ ಮತ್ತು ಬಳಗದವರಿಂದ ಕನ್ನಡ ಭಾವಗೀತೆಗಳ ಕಾರ್ಯಕ್ರಮ ಜರಗಿತು.

ಪ್ರಶಸ್ತಿ

ಜನವರಿ 17 ಮತ್ತು 18-ರಂದು ಮೈಸೂರಿನಲ್ಲಿ ಜರಗಿದ ರೋಟರಿ ಜಿಲ್ಲೆ 318-ರ ರೋಟರ್‍ಯಾಕ್ಟ್ ಜಿಲ್ಲಾ ಸಮ್ಮೇಳನದಲ್ಲಿ ಕಾಪು ರೋಟರ್‍ಯಾಕ್ಟ್ ಕ್ಲಬ್ಬಿಗೆ ಸಾಮುದಾಯಿಕ ಸೇವೆಯಲ್ಲಿ ಪ್ರಥಮ ಬಹುಮಾನ ದೊರೆತಿದೆ.

1986-ರ ಆದಿಯಲ್ಲಿ ರೋಟರ್‍ಯಾಕ್ಟ್ ಸಭಾಪತಿ ಎಚ್. ಆರ್. ಆಳ್ವರ ನೇತೃತ್ವದಲ್ಲಿ ಶಂಕರಪುರದ ರೋಟರಿ ಕ್ಲಬ್ ಕಾಪುವಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿತ್ತು. ತನ್ನ ಪ್ರಥಮ ವರ್ಷದಲ್ಲಿಯೇ ಉತ್ತಮ ಸಮಾಜ ಸೇವಾ ಕಾರ್ಯಕ್ರಮಗಳ ಮೂಲಕ ಕಾಪು ರೋಟರ್‍ಯಾಕ್ಟ್ ಕ್ಲಬ್‌ಗೆ ಈ ಗೌರವ ದೊರೆತಿದೆ.

● ಮೈಸೂರು ಜನವರಿ 24– ಜಯನಗರ ಬಡಾವಣೆಯ ಇಟ್ಟಿಗೆ ಕಂಟ್ರಾಕ್ಟರ್ ಚನ್ನಿಗೌಡ ಎಂಬವರು ಶಬರಿಮಲೆ ಯಾತ್ರೆಗೆ ಹೋಗಿದ್ದಾಗ ದಾರಿಯಲ್ಲಿ ಆಕಸ್ಮಿಕವಾಗಿ ಅಸು ನೀಗಿದರು.

ಜೀಪು ಉರುಳಿ ಸಾವು

(ಮುಂಗಾರು ವರದಿ)

ಮಡಿಕೇರಿ, ಜ. 24– ನಿಲ್ಲಿಸಿದ್ದ ಜೀಪೊಂದಕ್ಕೆ ಇಟ್ಟಿದ್ದ ಕಲ್ಲನ್ನು ತೆಗೆದಾಗ ಆ ಜೀಪ್ ಹಿಂದಕ್ಕೆ ಚಲಿಸಲಾರಂಭಿಸಿದ್ದು ಇದನ್ನು ತಡೆದು ನಿಲ್ಲಿಸಲು ಯತ್ನಿಸಿದ ಆದರ ಚಾಲಕ ಹಾಗೂ ಮಾಲೀಕನಾದ ವ್ಯಕ್ತಿ ತೀವ್ರ ಗಾಯಗೊಂಡು ಇಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ದಾರುಣ ಘಟನೆಯೊಂದು ನಡೆದಿದೆ.

ಇಲ್ಲಿನ ರಾಣಿ ಪೇಟೆಯ ಬಳಿ ಜ. 15 ರಂದು ಅಪರಾಹ್ನ 3 ಗಂಟೆಗೆ ತಮ್ಮ ಜೀಪನ್ನು ನಿಲ್ಲಿಸಿದ್ದ ಬೆಟ್ಟತ್ತೂರು ಗ್ರಾಮದ ಕೋಪೆರೆ ತಿಮ್ಮಯ್ಯ (59) ಅವರು ತಮ್ಮ ಕೆಲಸವನ್ನು ಮುಗಿಸಿ ವಾಪಾಸು ಜೀಪಿಗೆ ಇಟ್ಟ ಕಲ್ಲನ್ನು ತೆಗೆದಾಗ ಈ ದುರ್ಘಟನೆ ನಡೆಯಿತು. ತಿಮ್ಮಯ್ಯ ಅವರ ತಲೆ ಹಾಗೂ ಎದೆಗೆ ತೀವ್ರ ಪೆಟ್ಟಾಗಿದ್ದು ಅವರನ್ನು ಚಿಕಿತ್ಸೆಗಾಗಿ ಇಲ್ಲಿನ ಸರಕಾರಿ ಆಸ್ಪತ್ರೆಗೆ ಸೇರಿಸಿದರೂ ಪ್ರಯೋಜನವಾಗದೆ ದುರ್ಮರಣಗೊಂಡರು.

ಪಂಜ ಜೇಸಿಸ್ ಪದಗ್ರಹಣ

ಪಂಜ, ಜ. 24–ಇತ್ತೀಚೆಗೆ ಪಂಜದಲ್ಲಿ ಜರಗಿದ ಪಂಜ ಜೇಸಿಸ್ ಪದ ಗ್ರಹಣ ಸಮಾರಂಭದಲ್ಲಿ 1987ರ ಪದಾಧಿಕಾರಿಗಳು ರಾಜ್ಯ ಉಪಾಧ್ಯಕ್ಷ ರವೀಂದ್ರ, ಟಿ. ಇವರ ಸಮಕ್ಷಮದಲ್ಲಿ ಪ್ರತಿಜ್ಞೆ ಸ್ವೀಕರಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ಗೋಪಾಲಕೃಷ್ಣರು ಪಂಜ ಜೇಸಿಸ್ ಸಾಧಿಸಿದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಹೊಸ ಪದಾಧಿಕಾರಿಗಳಿಂದ ಮತ್ತಷ್ಟು ಎತ್ತರದ ಸಾಧನೆಯನ್ನು ಅಪೇಕ್ಷಿಸಿದರು.

ಕಳೆದ ಸಾಲಿನ ಕಾರ್ಯದರ್ಶಿ ಪಿ. ಕೆ. ನಾರಾಯಣ ಕೋಶಾಧಿಕಾರಿ ವಿಲ್ಪೆಡ್ ಡಿಮೆಲ್ಲೊ ತಮ್ಮ ವರದಿಗಳನ್ನು ಸಲ್ಲಿಸಿದ ನಂತರ ನಿಕಟ ಪೂರ್ವ ಅಧ್ಯಕ್ಷ ಜಯರಾಮ ರಾವ್ ತಮಗೆ ಸಂತೃಪ್ತಿ ತಂದುಕೊಟ್ಟ ತಮ್ಮ ಸಾಧನೆಗಳ ಹಿನ್ನೆಲೆಯಲ್ಲಿ ಹೊಸ ತಂಡಕ್ಕೆ ಶುಭ ಹರಸಿದರು.

ಸಮಾರಂಭಕ್ಕೆ ವಿಶೇಷ ಆಮಂತ್ರಿತರಾಗಿ ಆಗಮಿಸಿದ ಸುಳ್ಯ ನೆಲ್ಯಾಡಿ, ಕಡಬ ಜೇಸಿ ಸದಸ್ಯರ ಮತ್ತು ಪಂಜನಾಗರಿಕರ ಸಮಕ್ಷಮದಲ್ಲಿ ಕಳೆದ ಸಾಲಿನಲ್ಲಿ ರಾಜ್ಯದ ಅತ್ಯುತ್ತಮ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದ ರವೀಂದ್ರ ದಂಪತಿಗಳನ್ನು ಸನ್ಮಾನಿಸಲಾಯಿತು. ಹೊಸ ಕಾರ್ಯದರ್ಶಿ ರಮೇಶ್‌ರವರು ವಂದನಾರ್ಪಣೆಯನ್ನಿತ್ತರು. ಈ ಸಂದರ್ಭದಲ್ಲಿ ಪ್ರತಿಜ್ಞೆ ಸ್ವೀಕರಿಸಿದ ಹೊಸ ಪದಾಧಿಕಾರಿಗಳು.

ಅಧ್ಯಕ್ಷ:–ಸದಾನಂದ ಪಾದೆ. ಉಪಾಧ್ಯಕ್ಷರು:– ಉದಯಭಾನು, ಪಿ. ಜಿ. ಸದಾಶಿವ, ನರೇಂದ್ರ ಕಾಮತ್. ಕಾರ್ಯದರ್ಶಿ:-ಬಿ. ರಮೇಶ್, ಪಿ. ವಿಷ್ಣು ಭಟ್, ಕೋಶಾಧಿಕಾರಿ:– ಕೆ. ಕೃಷ್ಣವೈಲಾಯ, ನಿರ್ದೇಶಕರುಗಳು-ಸಿ. ಕಾರ್ಯಪ್ಪ, ವಿಲ್ಪೆಡ್ ಡಿಮೆಲ್ಲೊ, ನಾಗಪ್ಪಗೌಡ, ಪದ್ಮಯಗೌಡ, ಪಿ.ಕೆ. ವಾಸುದೇವ, ಈಶ್ವರ, ನರಸಿಂಹ ಮೇಸ್ತ್ರ, ಲೋಕನಾಥ ಮತ್ತು ರತ್ನಾಕರ.

ಮಂಡಲ ಅಭ್ಯರ್ಥಿಗಳಿಗೆ ಸಮಾನ ವೇದಿಕೆ

ಪಂಜ ಮಂಡಲದ ನಾಲ್ಕು ಗ್ರಾಮಗಳಿಂದ ಮಂಡಲ ಪಂಚಾಯತಿಗೆ ಸ್ಪರ್ಧಿಸ ಬಯಸಿದ ಅಭ್ಯರ್ಥಿಗಳನ್ನು ಕೇನ್ಯ, ಪಂಚಿತ್ತಾಡಿ ಮತ್ತು ಪಂಜದಲ್ಲಿ ಸಮಾನ ವೇದಿಕೆಗೆ ಆಹ್ವಾನಿಸಿ, ನಾಗರಿಕರೆದ್ಯುರ ಮುಖಾಮುಖಿಯಾಗಿಸಿದಅಪೂರ್ವ ಕಾರ್ಯಕ್ರಮವನ್ನೆ ಪಂಜ ಜೇಸಿಸ್ ಜನವರಿ 14 ಮತ್ತು 15 ರಂದು ನಿಯೋಜಿಸಿತ್ತು.

ತುಂಬು ಉತ್ಸಾಹದಿಂದ ಸೇರಿದ್ದ ಜನಸ್ತೋಮವನ್ನು ಉತ್ಸಾಹದಿಂದಲೇ ಎದುರಾದ ಸ್ಪರ್ಧಿಗಳು ಅತ್ಯಂತ ಆರೋಗ್ಯಕರವಾದ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುವ ಮೂಲಕ ಕಾರ್ಯಕ್ರಮದ ಅಪೂರ್ವ ಯಶಸ್ಸಿಗೂ ಕಾರಣ. ಪಂಚಿತ್ತಾಡಿಯಲ್ಲಿ ಡಾ। ಶಿವರಾಮ್, ಕೇನ್ಯದಲ್ಲಿ ಲಯನ್ ಅಧ್ಯಕ್ಷ ಜಯಸೀತಾರಾಮ ಮತ್ತು ಪಂಜದಲ್ಲಿ ಕೋಟೆ ಸದಾನಂದ ಇವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು ಮಂಡಲ ಪಂಚಾಯತ್ ಶಾಸನದ ಮತ್ತು ಈ ವೇದಿಕೆಯ ಮಹತ್ವಗಳನ್ನು ಬಿತ್ತರಿಸಿದರು.

ಜೇಸಿ ಅಧ್ಯಕ್ಷರಾದ ಸದಾನಂದರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಈ ಕಾರ್ಯಕ್ರಮಗಳನ್ನು ಜೇಸೀವಿಲ್ಫ್ರೆಡ್ ಡಿಮೆಲ್ಲೋ, ಬಿ. ರಮೇಶ್, ವಿಷ್ಣು ಭಟ್, ದ್ರುವ ಕುಮಾರ್, ಸುಬ್ರಾಯ, ಕೃಷ್ಣವೈಲಾಯ ಮೊದಲಾದವರು ನಿರ್ವಹಿಸಿದರು.

ಪಕ್ಷಗಳ ನಡುವೆ ಅಂತರ ಅಂವೇ ಇಲ್ಲದಂತೆ ಈ ಸಮಾರಂಭಕ್ಕೆ ಆಗಮಿಸಿದ್ದ ಸ್ಪರ್ಧಿಗಳು ಮತ್ತು ಜನಸಾಮಾನ್ಯರು ಜೇನ ತುಂಡೆಯಂತಿದ್ದು ಈ ಕಾರ್ಯಕ್ರಮ ಪಂಜದಂತಹ ಹಳ್ಳಿಗೆ ಪ್ರಶಂಸೆಯನ್ನೇ ಪರಿಚಯಿಸುವಲ್ಲಿ ಪಂಜ ಜೇಸಿಸ್‌ನ ಮಂಡಲ ಪಂಚಾಯತ್ ಕಾರ್ಯಕ್ರಮ ಸರಣಿಯ ಮುಖರ ಕಾರ್ಯಕ್ರಮವಾಗಿದ್ದದೆ.

ತ್ಯಾಗರಾಜ ಜಯಂತಿ

ಅಜ್ಜಂಪುರ, ಜ. 24–ಇಲ್ಲಿನ ಮಹಿಳಾ ಸಂಘದವರ ಆಶ್ರಯದಲ್ಲಿ ತ್ಯಾಗರಾಜ ಜಯಂತಿಯನ್ನು ಜಯಲಕ್ಷ್ಮಿ ನಾಗರಾಜ ರಾಮು ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಆಚರಿಸಲಾಯಿತು.

ಶೀತಮ್ಮ ಕೃಷ್ಣಭಟ್ಟರು ಮೊದಲಿಗೆ ಸ್ವಾಗತಿಸಿದರು. ತ್ಯಾಗರಾಜರ ಸಂಗೀತದ ಬಗ್ಗೆ ಪದ್ಮಾವತಮ್ಮ, ಶೀತಮ್ಮ, ಗುಂಡಮ್ಮ, ಜಮುಲಕ್ಷ್ಮಮ್ಮ ಮಾತನಾಡಿದರು. ಸುನಂದಮ್ಮ, ಜಯಲಕ್ಷ್ಮಮ್ಮ, ಸುಬ್ಬಲಕ್ಷ್ಮಮ್ಮ, ಇಂದ್ರಮ್ಮ ಇವರಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ದಾಕ್ಷಾಯಿಣಿ ವಂದಿಸಿದರು. ನಂತರ ಮಂಗಳಾರತಿ ನಡೆಯಿತು.

ಭಾರೀ ದನಗಳ ಜಾತ್ರೆ

ಇಲ್ಲಿನ ಮಂಡಲ ಪಂಚಾಯತಿಯ ಆಶ್ರಯದಲ್ಲಿ 28ನೇ ವರ್ಷದ ಭಾರೀದನಗಳ ಜಾತ್ರೆಯು ಫೆ. 9ರಿಂದ ಮಾ. 3ರವರೆಗೆ ನಡೆಯಲಿದೆ. ಜಾತ್ರಾ ಸಿದ್ಧತೆಗಳು ಭರದಿಂದ ಸಾಗಿವೆ.

ವೇತನದಲ್ಲಿ ಅನ್ಯಾಯ: ಗ್ರಾಮಲೆಕ್ಕಿಗರ ಪ್ರತಿಭಟನೆ

ಬೆಳ್ತಂಗಡಿ, ಜ. 24– ಬೆಳ್ತಂಗಡಿ ತಾಲೂಕು ಗ್ರಾಮ ಲೆಕ್ಕಿಗರ ಸಂಘವು ಇತ್ತೀಚೆಗೆ ಇಲ್ಲಿ ಸಭೆ ಸೇರಿ ಮೂರನೇ ವೇತನದಲ್ಲಿ ಗ್ರಾಮ ಲೆಕ್ಕಿಗರಿಗಾದ ಅನ್ಯಾಯವನ್ನು ಪ್ರತಿಭಟಿಸಿತು.

ಇತರ ಇಲಾಖೆಗಳ ಉದ್ಯೋಗಿಗಳಿಗೆ ನಿಗದಿಸಲಾದ ವೇತನವನ್ನು ಗ್ರಾಮಲೆಕ್ಕಿಗರಿಗೂ ಕೊಡುವಂತೆ ಸಭೆ ಒತ್ತಾಯಿಸಿತು.

ಯುವತಿ ನಾಪತ್ತೆ

ಉಡುಪಿ, ಜ. 24- ಮಣಿಪಾಲದ ರಂಗಪ್ಪ ನಾಯಕ್ ಎಂಬವರ ಪುತ್ರಿ ಗೀತಾ (21) ಎಂಬ ತರುಣಿ ಉಡುಪಿಯ ಎಂ.ಜಿ.ಎಂ. ಕಾಲೇಜಿಗೆ ಹೋಗುತ್ತೇನೆಂದು ಜ. 17ರಂದು ಮನೆಯಿಂದ ಹೋದವಳು ಈವರೆಗೂ ಬಂದಿಲ್ಲವೆಂದು ತಿಳಿದು ಬಂದಿದೆ. ಈ ಬಗ್ಗೆ ಮನೆಯವರು ಪೊಲೀಸರಿಗೆ ದೂರು ನೀಡಿದ್ದಾರೆ.

ಕಾರ್ಕಳ ಜೇಸಿಸ್ ಸ್ಪರ್ಧೆಗಳು

ಕಾರ್ಕಳ, ಜ. 24-ಕಾರ್ಕಳ ಜೇಸಿಸ್ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ ಕಾರ್ಕಳದ ಪರಿಸರದ ಶಾಲಾ ಮಕ್ಕಳಿಗೆ ಭಾಷಣ ಹಾಗೂ ಛದ್ಮ ವೇಷ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಸ್ಪರ್ಧೆಯ ಯೋಜನಾ ನಿಯೋಜಕರಾದ ಚಿದಾನಂದ ಕಾಮತ್,ಕಾರ್ಮಿಕ ನಿರೀಕ್ಷಕರವರ ಕಚೇರಿ, ಕಾರ್ಕಳ ಇವರನ್ನು ಸಂಪರ್ಕಿಸಬಹುದೆಂದು ಜೇಸಿ ಅಧ್ಯಕ್ಷ ಪದ್ಮನಾಭ ಶೆಟ್ಟಿಗಾರ್‌ರವರು ತಿಳಿಸಿರುತ್ತಾರೆ.

ನೇಣು ಬಿಗಿದು ಆತ್ಮಹತ್ಯೆ

ಮಂಗಳೂರು, ಜ. 24 : – ನಗರದ ಮರೋಳಿ ಗ್ರಾಮದ ಪಜ್ಜೋಡಿ ಎಂಬಲ್ಲಿನ ನಿವಾಸಿ ಲಾರೆನ್ಸ್ ಸೊರೇನ್ಸೋ (46) ಎಂಬವರು ಇಂದು ಬೆಳಿಗ್ಗೆ ತನ್ನ ಮನೆಯೊಳಗಡೆ ಮನೆ ಮಾಡಿಗೆ ನೇಣು ಬಿಗಿದು ಆತ್ಮ ಹತ್ಯೆ ಮಾಡಿರುವುದಾಗಿ ತಿಳಿದು ಬಂದಿದೆ.

ಕಂಕನಾಡಿ ಪೋಲಿಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಜಯಂತ ವಿ. ಶೆಟ್ಟಿ ಅವರು ಕೇಸು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೈಕ್ ಸವಾರನಿಗೆ ಸ್ಥಳದಲ್ಲೇ ದಂಡ

ಮಂಗಳೂರು, ಜ. 24– ನಗರದ ಕಂಕನಾಡಿ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಮಾಧವರಾವ್ ಅವರು ಇಂದು ಮೋಟಾರು ವಾಹನಗಳ ತನಿಖೆ ಸಂದರ್ಭದಲ್ಲಿ ಓರ್ವ ಮೋಟಾರು ಬೈಕ್ ಸವಾರನಿಗೆ 870 ರೂ. ದಂಡ ವಿಧಿಸಿ, ಸ್ಥಳದಲ್ಲೇ ದಂಡ ವಸೂಲಿ ಪಡೆದರು.

'ಕಡ್ಡಾಯ ವೃತ್ತಿ ಶಿಕ್ಷಣ ಜಾರಿಗೆ ಬರಬೇಕು'

ಮಂಗಳೂರು, ಜ. 24 – "ಇಂದಿನ ಶಿಕ್ಷಣ ಪದ್ಧತಿ ದೋಷ ಪೂರ್ಣವಾದದ್ದು. ಕೇವಲ ಗುಲಾಮರನ್ನು ತಯಾರಿಸುವಂಥದ್ದು" ಎಂದು ಖ್ಯಾತ ಕವಿ ಕಯ್ಯಾರ ಕಿಞ್ಞಣ್ಣರೈ ಅವರು ಹೇಳಿದರು.

ಅವರು ಇತ್ತೀಚೆಗೆ ಅಡ್ಯನಡ್ಕದ ಜನತಾ ಪ್ರೌಢ ಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ವರ್ಷಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಈಗ ಇರುವ ಶಿಕ್ಷಣ ಕ್ರಮ ಬದಲಾಗಿ ವಿವಿಧ ವೃತ್ತಿಗಳಲ್ಲಿ ವಿಶೇಷ ಪರಿಣತಿ ನೀಡುವ ಪಾಠಕ್ರಮ ಜಾರಿಗೆ ಬರಬೇಕು ಎಂದು ಹೇಳಿದ ಕಯ್ಯಾರ ಕಿಞ್ಞಣ್ಣ ರೈ ಅವರು ಇಂಥ ಶಿಕ್ಷಣ ಕ್ರಮ ಹೈಸ್ಕೂಲು ಮಟ್ಟದಲ್ಲೇ ಕಡ್ಡಾಯವಾಗಬೇಕು. ಹೀಗಾಗದೆ ನಮ್ಮ ದೇಶದಲ್ಲಿ ನಿಜವಾದ ಶಕ್ತಿ ಅರಳಿಕೊಳ್ಳಲಾರದು ಎಂದರು.

"ಇಂದು ಯಾರೂ ಯಾರಿಗೂ ಉದ್ಯೋಗ ಕೊಡಲಾರದ ಸ್ಥಿತಿ ಬಂದಿದೆ. ಡಿಗ್ರಿ ಸಂಪಾದನೆ ವ್ಯರ್ಥ ಶ್ರಮವಾಗಿ ಪರಿಣಮಿಸಿದೆ" ಎಂದ ರೈ ಅವರು "ಅಭಿರುಚಿಯ ವೃತ್ತಿಗಳಲ್ಲಿ ತಮ್ಮನ್ನು ಕಂಡುಕೊಂಡು ಅಭಿವೃದ್ಧಿ ಸಾಧಿಸುವುದೇ ಇಂದಿನ ವಿದ್ಯಾರ್ಥಿಗಳ ಗುರಿಯಾಗಬೇಕು" ಎಂದರು.

ಶಾಲಾ ಕರೆಸ್ಪಾಂಡೆಂಟ್ ವಾರಣಾಶಿ ಸುಬ್ರಾಯ ಭಟ್ ಸ್ವಾಗತಿಸಿದರು. ಮುಖ್ಯೋಪಾಧ್ಯಾಯರುಗಳಾದ ಬಿ. ಈಶ್ವರಭಟ್ ಹಾಗೂ ಎಂ. ನಾರಾಯಣ ಭಟ್ ವರದಿ ವಾಚಿಸಿದರು. ವಿ. ಗೆ ನಾಯಕ್ ಕಾರ್ಯಕ್ರಮ ನಿರ್ದೇಶಿಸಿ ವಂದಿಸಿದರು.

ಕೋಣಂದೂರು ಜೇಸಿಸ್ ಅಧ್ಯಕ್ಷರ ಆಯ್ಕೆ

ತೀರ್ಥಹಳ್ಳಿ, ಜ. 24– ಕೋಣಂದೂರು ಜೇಸಿಸ್‌ನ 1986ರ ಪದಾಧಿಕಾರಾವಧಿ ಮುಗಿದಿದ್ದು ನೂತನ ಸಾಲಿನ ಅಧ್ಯಕ್ಷರಾಗಿ ಜಿ.ಕೆ. ಜಯರಾಂ ಆಯ್ಕೆಗೊಂಡರು ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಎಂ.ಡಿ. ನಂಜುಂಡ ಅವರು ಜಿ.ಕೆ. ಶಿವರಾಂರಿಗೆ ಪ್ರಮಾಣ ವಚನ ಬೋಧಿಸಿದರು. ಉಳಿದ ಪದಾಧಿಕಾರಿಗಳಿಗೆ ಜಿ.ಕೆ. ಜಯರಾಂ ಪ್ರಮಾಣ ವಚನ ಬೋಧಿಸಿದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಜೇಸಿಸ್ ಉಪಾಧ್ಯಕ್ಷ ಎಂ.ಜಿ. ಸೋಮಶೇಖರ್, ಟಿ.ಕೆ. ಮೋಹನ್ ಆಗಮಿಸಿದ್ದರು. ಆರ್. ಅಂಡ್. ಆರ್. ನಿರ್ದೇಶಕರಾದ ಎಚ್.ಜಿ. ಎಫ್. ರಮೇಶಬಾಬು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಜೆ. ಸಿ. ವಾಣಿಯನ್ನು ಕೆ. ಎಸ್. ಅಮರೇಂದ್ರ, ಮುದ್ದಣ್ಣ ಶೆಟ್ಟಿ ಓದಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಕೆ. ಬಿ. ಮುಕುಂದ ಸ್ವಾಗತಿಸಿದರು. ಕೊನೆಯಲ್ಲಿ ಕೆ. ಎಂ. ಮೋಹನ್ ವಂದಿಸಿದರು.

ಮತದಾರರಿಗೆ ಹವಾಲ್ದಾರ್ ಕೃತಜ್ಞತೆ

ಕುಂದಾಪುರ, ಜ. 24–ಕುಂದಾಪುರ ತಾಲೂಕಿನ ಮತದಾರರು, ಜನತಾಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಚುನಾವಣೆಯನ್ನು ವ್ಯವಸ್ಥಿತವಾಗಿ ನಡೆಸಿದ ಚುನಾವಣಾ ಅಧಿಕಾರಿಗಳು ಸಿಬ್ಬಂದಿಗಳು ಹಾಗೂ ಯಾವುದೇ ರೀತಿಯಲ್ಲಿ ಅಹಿತಕರ ಘಟನೆ ನಡೆಯದಂತೆ ಅತ್ಯುತ್ತಮ ಬಂದೋಬಸ್ತು ನಡೆಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕುಂದಾಪುರ ತಾಲೂಕು ಜನತಾ ಅಧ್ಯಕ್ಷ ಪ್ರಭಾಕರ ಹವಾಲ್ದಾರ್ ಕೃತಜ್ಞತೆ ಅರ್ಪಿಸಿದ್ದಾರೆ.

ಯುವಜನತಾ ಅಧ್ಯಕ್ಷರ ಕೃತಜ್ಞತೆ

ದಕ್ಷಿಣ ಕನ್ನಡದಲ್ಲಿ ಜಿಲ್ಲಾ ಪರಿಷತ್ ಚುನಾವಣೆಗೆ ವ್ಯಕ್ತಿನಿಷ್ಠವಾಗಿ ಜನತಾ ಪಕ್ಷದ ಬಗ್ಗೆ ಒಲವು ವ್ಯಕ್ತಪಡಿಸಿದ ಮತದಾರರಿಗೆ ವಿಶೇಷವಾಗಿ ಕುಂದಾಪುರದಲ್ಲಿ ಜನತಾ 22ರಲ್ಲಿ 15 ಮಂಡಲ ಪಂಚಾಯತ್ ಸ್ಥಾನಗಳಿಸಲು ಕಾರಣರಾದ ಎಲ್ಲರಿಗೂ ಜಿಲ್ಲಾ ಯುವ ಜನತಾ ಅಧ್ಯಕ್ಷ ಗೋವರ್ಧನ ಕೃತಜ್ಞತೆ ಸಲ್ಲಿಸಿದ್ದಾರೆ.

ಜನತಾ ಪ್ರತಿನಿಧಿಗಳಾಗಿ ಆಯ್ಕೆ ಹೊಂದಿದವರು ಜನರ ವಿಶ್ವಾಸಕ್ಕೆ ಸರಿಯಾಗಿ ಕೆಲಸ ಮಾಡಬೇಕಾದುದು ಅಗತ್ಯವಾಗಿದೆ ಎಂದವರು ತಿಳಿಸಿದ್ದಾರೆ.

ನಿಧನ

ಮೈಸೂರು, ಜ. 24 – ಇಲ್ಲಿನ ನಗರ ಪಾಲಿಕೆಯ ಸದಸ್ಯೆ ಸೌಭಾಗ್ಯ ಮೂರ್ತಿಯವರ ಪತಿ ಮೂರ್ತಿ ಇತ್ತೀಚೆಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

27ಕ್ಕೆ ನಳ್ಳಿ ನೀರಿಲ್ಲ

ಮಂಗಳೂರು, ಜ. 24 : –ತುಂಬೆಯ ಯಂತ್ರಸ್ಥಾವರದಲ್ಲಿ ಹೊಳೆತ್ತುವ ಕಾರ್ಯದ ನಿಮಿತ್ತ ಜನವರಿ 27ರಂದು (ಮಂಗಳವಾರ) ಮಂಗಳೂರು ಮಹಾನಗರ ಪಾಲಿಕೆ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ನೀರು ಪೂರೈಕೆ ಮಾಡುವಲ್ಲಿ ಅಡಚಣೆಯುಂಟಾಗುವುದು ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮಂಗಳೂರು ಉಪವಿಭಾಗದ ಸಹಾಯಕ ಕಾರ್ಯಕಾರಿ ಇಂಜಿನಿಯರ್ ತಿಳಿಸಿದ್ದಾರೆ.

ಮತದಾರರಿಗೆ ಕೃತಜ್ಞತೆ

ಕಲ್ಲಡ್ಕ, ಜ. 24– ಕಳೆದಮಂಗಳವಾರ ನಡೆದ ಮಂಡಲ ಪಂಚಾಯತ್ ಚುನಾವಣೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಅಭಿಮಾನಿಗಳಿಗೆ ಹಾಗೂ ಮತದಾರರಿಗೆ ಇಲ್ಲಿನ ಪಕ್ಷೇತರ ಅಭ್ಯರ್ಥಿ ಕೆ. ಕೆ. ಇಬ್ರಾಹಿಂ ಕೃತಜ್ಞತೆ ಸಲ್ಲಿಸಿದ್ದಾರೆ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ

ಭೂಸ್ವಾಧೀನ ಕಾಯ್ದೆ ಕಲಂ 4 (1) ರನ್ವಯ ಅಧಿಸೂಚನೆ

ಕ್ರಮಾಂಕ: ಆರ್‌ಬಿ. ಎಲ್‌ಎಕ್ಯೂ. 3 ಎಸ್‌ಆರ್. 8/86–87 ದಿನಾಂಕ: 12–1–87

ಈ ಮೂಲಕ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಕಾಳಿ ಜಲವಿದ್ಯುತ್ ಯೋಜನೆ (ಅಪ್ಪರ ಕಾನೇರಿ ಡ್ಯಾಮ) ಬಗ್ಗೆ ಬೇಕಾಗಬಹುದೆಂದು ಜಿಲ್ಲಾಧಿಕಾರಿ, ಉತ್ತರ ಕನ್ನಡ ಕಾರವಾರ ಇವರಿಗೆ ಕಂಡು ಬಂದಿದೆ.

1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸ್ವಾಧೀನ ಕಾಯ್ದೆಯ ಕಲಂ 4 (1) ರನ್ವಯ ಸಂಬಂಧಿಸಿದವರಿಗೆ ಸಾರ್ವಜನಿಕವಾಗಿ ಈ ಮೂಲಕ ನೋಟೀಸು ಕೊಡುವದೇನೆಂದರೆ, 1894ನೇ ಭೂಸ್ವಾಧೀನ ಕಾಯ್ದೆ ಕಲಂ 4 (1)ರ ಪ್ರಕಾರ ವಿಹಿತವಾದ ಅಧಿಕಾರಗಳನ್ನು ಉಪಯೋಗಿಸಲು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕಾಳಿನದಿ ಯೋಜನೆ, ದಾಂಡೇಲಿ ಇವರಿಗೆ ಮತ್ತು ಅವರ ಸಿಬ್ಬಂದಿ ಹಾಗೂ ಕೆಲಸದವರಿಗೆ ಈ ಮೂಲಕ ಅಧಿಕಾರ ನೀಡಲಾಗಿದೆ.

ಸದರೀ ಜಮೀನಿನಲ್ಲಿ ಆಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯು ಈ ಬಗ್ಗೆ ಆಕ್ಷೇಪಣೆಗಳನ್ನು ಮಾಡುವವಿದ್ದರೆ, ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟವಾದ 30 ದಿವಸದೊಳಗಾಗಿ 1961ರ ಕರ್ನಾಟಕ ಕಾಯ್ದೆ 17ರಲ್ಲಿ ತಿದ್ದುಪಡಿಯಾದ 1894ನೇ ಭೂಸ್ವಾಧೀನ ಕಾಯ್ದೆಯ ಕಲಂ 3(ಸಿ)ದ ಅಡಿ ಜಿಲ್ಲಾಧಿಕಾರಿಗಳು ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ನೇಮಕ ಮಾಡಲಾದ ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕಾಳಿನದಿ ಯೋಜನೆ, ದಾಂಡೇಲಿ ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಹೀಗೆ ಕರ್ನಾಟಕ ಸರಕಾರದ ಪ್ರಕಟಣೆ ಕ್ರ. ಆರ್‌ಡಿ 53 ಎಕ್ಯೂಡಬ್ಲ್ಯು 75 ದಿನಾಂಕ: 25ನೇ ಜೂನ್ 1975ರ ಮೂಲಕ ತಿಳಿಸಲಾಗಿದೆ.

ಸದರೀ ಜಮೀನಿನ ಅಧಿಕೃತ ಸ್ವಾಧೀನಕ್ಕಾಗಿ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣೀದಾರ ಅಥವಾ ಇತರ ವ್ಯಕ್ತಿಗೆ ಅಡಚಣೆಗಳನ್ನುಂಟು ಮಾಡುವದಾಗಲೀ ಅಥವಾ ಅತಿಕ್ರಮಿಸುವದಾಗಲೀ ಮಾಡಬಾರದೆಂದು ಸದರೀ ಜಮೀನಿನಲ್ಲಿ ಆಸಕ್ತಿಯುಳ್ಳವರಿಗೆಲ್ಲಾ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರೀ ಜಮೀನಿನ ವಿಲೇವಾರಿಗಾಗಿ ಮಾರಾಟ, ಗುತ್ತಿಗೆ ಅಡವು, ಹಸ್ತಾಂತರ ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಕರಾರುಗಳನ್ನು ಇಲ್ಲವೇ ಅಭಿವೃದ್ಧಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ಅನಂತರ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಕಾರವಾರ ಇವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಭೂಸ್ವಾಧೀನ ಮಾಡಲಾಗುವ ಸದರೀ ಜಮೀನಿನ ಅಂತಹ ಭಾಗಗಳಿಗೆ ಪರಿಹಾರ ನಿರ್ಧರಿಸುವ ಅಧಿಕಾರಿಯಿಂದ ಸದರೀ ಅಧಿನಿಯಮದ 24ನೇ ಪ್ರಕರ್ಣ (7ನೇ ಖಂಡದ) ಮೇರೆಗೆ ಉಪೇಕ್ಷಿಸಲಾಗುವದು.

ಸದರೀ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನ ಅಧಿಕಾರಿ, ಕಾಳಿನದಿ ಯೋಜನೆ, ದಾಂಡೇಲಿ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಉತ್ತರ ಕನ್ನಡ — ತಾಲೂಕು: ಸೂಪಾ — ಹೋಬಳಿ: ಕುಂಬಾರವಾಡಾ — ಗ್ರಾಮ: ಕುಂಡಲ

ಕ್ರ. ಸಂ.	ಖಾತೇದಾರರ ಹೆಸರು	ಅನುಭವದಾರರ ಹೆಸರು:	ಸರ್ವೆನಂಬ್ರ	ತರಹೆ	ಚಕಬಂದಿ ಪೂರ್ವ	ಚಕಬಂದಿ ಪಶ್ಚಿಮ	ಚಕಬಂದಿ ಉತ್ತರ	ಚಕಬಂದಿ ದಕ್ಷಿಣ	ಅಂದಾಜು ವಿಸ್ತೀರ್ಣ ಎ. ಗುಂ.ಆ.	ಶೀರ್ವೆ ರೂ. ಪೈ.
1	2	3	4	5	6	7	8	9	10	11
1)	ಗಣಬಾ ತಾಂಬಡೋ ವೇಳೀಫ	—ಖುದ್ದ—	90:1	ತರಿ	91	89	89, 93	ಎಫ್‌ಎಸ್, 101, 93	0-20-0 ಪೋ.-01-0	2-63
2)	—ಸದರ—	—ಖುದ್ದ—	90:2	ತರಿ	,,	,,	,,	,,	0-18-0	2-05
3)	—ಸದರ— ಅ.ಕು.ಮು.	—ಖುದ್ದ—	108	ತರಿ	ಎಫ್‌ಎಸ್ 93	152	109	107	0-14-0 ಪೋ. 0-02-0	1-66
4)	ವೇಳೀಫ ಭಿಕೋ ಪಾವಟೋ	—ಖುದ್ದ—	109	ತರಿ	,,	110, 152	110	108	0-36-0	3-97
5)	—ಸದರ—	—ಖುದ್ದ—	110	ತರಿ	,,	156	ಎಫ್‌ಎಸ್ 93	109	1-33-0 ಪೋ. 0-01-0	7-74
6)	ವೇಳೀಫ ಗಣಬಾ ತಾಂಬಡೋ	—ಖುದ್ದ—	111	ತರಿ	,,	ಎಫ್‌ಎಸ್ 112	ನಾಲಾ	155	2-02-0	8-59

ಸಹಿ/ ಆರ್. ಸುರೇಶ, ಜಿಲ್ಲಾಧಿಕಾರಿ, ಉತ್ತರ ಕನ್ನಡ, ಕಾರವಾರ.